# ಪ್ರಸ್ತಾವನೆ

"ಪ್ರಾಣಲಿಂಗ ಜ್ಞಾನದರ್ಪಣ ಚಾರಿತ್ರ್ಯ" ಈ ಗ್ರಂಥವನ್ನು ನಾವು ಈಗ ಪ್ರಸಿದ್ಧಿಸಿದ್ದು ಇದರಲ್ಲಿ ಪ್ರಾಣಲಿಂಗದ ಸ್ವರೂಪದ ವಿವರಣೆ ಇದೆ. ಗ್ರಂಥಕಾರನು ಈ ವಿಷಯದ ವಿವೇಚನೆಯನ್ನು ಇದರಲ್ಲಿ ಬಹು ಚನ್ನಾಗಿ ಮಾಡಿರುತ್ತಾನೆ. ಇದು ಚಿಕ್ಕಗ್ರಂಥವಾದರೂ ಅರ್ಥ ಪೂರ್ಣವಾಗಿದೆ. ಇದು ತಿಳಿದು ಆಚರಿಸತಕ್ಕ ವಿಷಯವಾಗಿದೆ. ಇದರಲ್ಲಿಯ ತತ್ವಗಳನ್ನು ಲಿಂಗಪೂಜಾ ಕ್ರಮದಲ್ಲಿ ಅನುಗೊಳಿಸಬಹುದಾಗಿದೆ.

ಈ ಗ್ರಂಥವನ್ನು ನಾವು ಶ್ರೀ ಸಿ. ಸಾ. ಮಹಾಂತಣ್ಣವರ ಹುನ್ನೂರ ಇವರು ಕಳಿಸಿದ ಹಸ್ತಲಿಖಿತ ಪ್ರತಿಯ ಆಧಾರದಿಂದ ಸಿದ್ಧಪಡಿಸಿದ್ದೇವೆ. ಈ ಪ್ರತಿಯನ್ನು ಕಳಿಸಿದ್ದಕ್ಕೆ ನಾವು ಈ ಮಹನೀಯರಿಗೆ ಬಹಳ ಆಭಾರಿಯಾಗಿದ್ದೇವೆ.

ವಿಜಾಪುರ
ತಾ। ೧೩-೩-೧೯೫೩

ಫ. ಗು. ಹಳಕಟ್ಟಿ
ಸಂಪಾದಕ - ಶಿವಾನುಭವ

212
1758

ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ
ಕ್ರಮಾಂಕ 1758
ಶಿವಬಸವ ನಗರ
ಬೆಳಗಾವಿ ೧೦
ನಾಗನೂರ ಶ್ರೀ ರುದ್ರಾಕ್ಷಿಮಠ

# ಪ್ರಾಣಲಿಂಗ ಜ್ಞಾನದರ್ಪಣ ಚಾರಿತ್ರ.

ಶ್ರೀಗುರು ಬಸವಲಿಂಗಾಯ ನಮಃ. ಪ್ರಾಣಲಿಂಗ ಜ್ಞಾನದರ್ಪಣ ಚಾರಿತ್ರ ಬರೆಯುವದಕ್ಕೆ ಶುಭಮಸ್ತು. ಶ್ರೀರಸ್ತು.

**ಟೀಕು:—** ಐಶ್ವರ್ಯೋಫಲೇಕ್ಷಿತವಾದ ಆಚಾರಲಿಂಗ ಗುರು, ಮಂತ್ರ ಮೂರ್ತಿ ಸ್ವರೂಪವಾದ ಗುರುಲಿಂಗ 'ಬ', ಈಳನ ಸ್ವರೂಪವಾದ ಶಿವಲಿಂಗ 'ಸ', ನಿರೀಕ್ಷಣ ಸ್ವರೂಪವಾದ ಜಂಗಮಲಿಂಗ 'ವ', ಯಾಜನ ಸ್ವರೂಪವಾದ ಪ್ರಸಾದಲಿಂಗ 'ಲಿಂಗ', ವೇಧಾಸ್ವರೂಪವಾದ ಮಹಾಲಿಂಗ 'ಆಯ', ಈ ಷಡುಲಿಂಗಗಳಿಗೋಸ್ಕರ 'ನಮಃ' ನಮಸ್ಕರಿಸುತ್ತಿದ್ದೇನೆ.

ಪ್ರಾಣಲಿಂಗ, ಆಚಾರಾದಿ ನಿರ್ವಯಲ ಲಿಂಗಾಂತ್ಯವಾದ ದಶ ಲಿಂಗಗಳೇ ಪ್ರಾಣಲಿಂಗವೆಂಬ ಶಬ್ದಕ್ಕರ್ಥ. ಜ್ಞಾನ, ಇಂತಪ್ಪ ಪ್ರಾಣ ಲಿಂಗವನ್ನು ಅರಿವುದಕ್ಕೆ ದರ್ಪಣ ಕನ್ನಡಿಯಾಗುಳ್ಳಂಥ ಚಾರಿತ್ರ್ಯ, ಇಂತಪ್ಪ ಪ್ರಾಣಲಿಂಗಂಗಳ ಲಕ್ಷಣವನ್ನು ಈ ಕನ್ನಡಿಯೆನಿಸುವ ಇಪ್ಪತ್ತೇಳು ಪದಂಗಳಲ್ಲಿ ಕಾಣಬರುತ್ತಿಹುದು ಎಂಬುದೀಗ ಪ್ರಾಣಲಿಂಗಜ್ಞಾನ ದರ್ಪಣ ಚಾರಿತ್ರ್ಯವೆಂಬ ಶಬ್ದಕ್ಕರ್ಥ.

ಬರೆಯುವದಕ್ಕೆ ಶರಣಗಣಂಗಳು ಓದಿ ಅರ್ಥವಿಟ್ಟು ಆನಂದಿಸಲೆಂದು ಲಿಖಿಸುವದಕ್ಕೆ ಶುಭಮಸ್ತು.

ಈ ಇಪ್ಪತ್ತೇಳು ಪದಚಾರಿತ್ರ್ಯವನ್ನು ವಿರಚಿಸಿ ಲಿಖಿಸಿದಾತಂಗೆ ಪರಶಿವನಲ್ಲಿ ಮಾಂಗಲ್ಯವಾಗಲೆಂದು ಭಕ್ತ ಮಹಾಗಣಂಗಳು ಪ್ರಸಾದ ಆಶೀರ್ವಾದ ವಚನವ ಪಾಲಿಸುವುದು ಎಂಬುದೀಗ ಶುಭಮಸ್ತು ಎಂಬ ಶಬ್ದಕ್ಕರ್ಥ.

**ಪದಃ**— ಗರ್ಭಂತು ಪಲ್ಲವಿ, ಮುಂದೆ ಹೇಳುವ ಇಪ್ಪತ್ತೇಳು ಪದದೊಳಗಣ ಅರ್ಥವನ್ನು ಸಂಜ್ಞಾಮಾತ್ರವಾಗಿ ಈ ಪಲ್ಲವಿಯಲ್ಲಿ ಹೇಳುತ್ತಿಹುದೆಂಬುದೀಗ ಪದಗರ್ಭಂತು ಪಲ್ಲವಿ ಎಂಬ ಶಬ್ದಕ್ಕರ್ಥ.

**ವಾರ್ಧಿಕ**॥ ಶ್ರೀ ಸದಾಶಿವನ ಭಕ್ತರುಗಳಾರಾದೊಡಂ । ಓಸರಿಸದಂತರಂಗದೊಳು ದಶ ಚಕ್ರದ ನಿ। ವಾಸದೊಳ್ ಪದ್ಮಪ್ರಣಮದಿ ಲಿಂಗವರ್ಚಿಸಲು ಆ ಸದಾಶಿವರಪ್ಪರು. ॥ ಪಲ್ಲ ॥

॥ **ಟೀಕು** ॥ ಶ್ರೀ ಷಡ್ಗುಣೈಶ್ವರ್ಯ ಸಂಪತ್ಕರವನುಳ್ಳಂಥ ಸದಾ ಚಿರಕಾಲವು ಎಂಬುದೀಗ ಸದಾಶಿವನ ಮಾಂಗಲ್ಯ ಸ್ವರೂಪವನುಳ್ಳಂಥ ಪರಶಿವನ ಭಕ್ತರುಗಳು ಆರಾದೊಡಂ ದ್ವಿಜಾದಿ ಶ್ವಪಚಾಂತ್ಯವಾದ ಅಷ್ಟಾದಶ ಜಾತಿಯೊಳಗಾರಾದೊಡಾಗಲಿ ಓಸರಿಸದೆ ವಿಷ್ಣ್ವಾದಿ ದೇವತೆಗಳನ್ನು ಪೂಜಿಸದೆ ಲೌಕಿಕ ಮಾರ್ಗವತ್ತ ಚಿತ್ತ ಸಂಚಲಿಸದೆ ಅಂತರಂಗದೊಳು ಅಂತಪ್ಪ ಪರಶಿವನ ಪೂಜಿಸುವ ಶರಣನ ಸೂಕ್ಷ್ಮಾಂಗ ಕಾರಣಾಂಗದೊಳಗೆ ದಶಚಕ್ರ ಆಧಾರಾದಿ ಆಜ್ಞಾ ಚಕ್ರಾಂತ್ಯವಾದ ೧೦ ಚಕ್ರಂಗಳ ನಿವಾಸದೊಳು ಆ ದಶ ಚಕ್ರಂಗಳ ಮಧ್ಯದಲ್ಲಿರ್ಪ ಕಮಲಂಗಳ ಕುಹರ ಮಧ್ಯದೊಳು ಚತುಃಕೋಣೆ ಧನುರ್ಗತಿ, ತ್ರಿಕೋಣೆ ಷಟ್ಕೋಣೆ ವೃತ್ತಾಕಾರ ತಮಂಧಾಕಾರ ಶೂನ್ಯಾಕಾರವೆಂಬ ಮಂಡಲ ತ್ರಯಂ ಮಹಾಶೂನ್ಯಾಕಾರ ನಿಃಶೂನ್ಯಾಕಾರ ನಿರ್ವಯಲಾಕಾರವೆಂಬ ಲಿಂಗ ನಿವಾಸಸ್ಥಾನಂಗಳ ಗರ್ಭ ಗೃಹಂಗಳೊಳಗೆ ಎಂಬುದೀಗ ನಿವಾಸದೊಳ್ ಪದ್ಮ, ಆ ದಶ ಚಕ್ರಂಗಳೊಳಗಿರುವ ದಶ ಕಮಲಂಗಳ ಪ್ರಣಮದಿ ಆ ದಶದಳಾಕ್ಷರ ಕಮಲಂಗಳ ದಳಾಕ್ಷರ ಕರ್ಣಿಕಾಕ್ಷರ ಸ್ಮರಣೆಯಿಂದಲಿ ಲಿಂಗ ಆ ದಶಗರ್ಭ ಗೃಹಂಗಳೊಳಗಿರುವ ಆಚಾರಾದಿ ನಿರ್ವಯಲಾಂತ್ಯವಾದ ದಶ ಬ್ರಹ್ಮವನು ಅರ್ಚಿಸಲು ಆಯಾಯ ದಳ ಪ್ರಣಮ ಕರ್ಣಿಕಾ ಪ್ರಣಮ ಸ್ಮರಣೆಯಿಂದ ಆಯಾಯ ಕಮಲಂಗಳಲ್ಲಾಯಾಯ ಲಿಂಗಂಗಳ ನಂತರಂಗದಲ್ಲಿ ಮೌನದಿಂ ಪೂಜೆಯಂ ಮಾಡಲು ಆ ಸದಾಶಿವರಪ್ಪರು. ಅಂತಪ್ಪ ಶರಣನು ತನ್ನಂತರಂಗದಲ್ಲಿ ಇಂತಪ್ಪ ಪ್ರಾಣಲಿಂಗದರ್ಚನೆಯ ಮಾಡುತ್ತಿರಲಾ ಶರಣನೇ ಆ ಲಿಂಗದಲ್ಲಿ ಲಯವನೈದಿ ಆ ಲಿಂಗವೆಯಾದನೆಂಬುದೀಗ ಆ ಸದಾಶಿವರಪ್ಪರು ಎಂಬ ಶಬ್ದಕ್ಕರ್ಥ.



**ಪದಃ**— ಹಲವು ವ್ರತ ಶೀಲದೊಳು ಕುಲವು ನೂರೊಂದರೊಳು । ಛಲ ನೇಮಗಳ ಹಿಡಿದು ಹೊಲಬುಗೆಡುವರಿಗೆ ಇದು । ಅಳವಡದು ಗುರುಲಿಂಗ ಜಂಗಮದಿ ತಲ್ಲೀಯವೊಳ ಹೊರಗೆವೊಂದೆಂಬಗೆ॥ ಸಲುವದಿದು ಅಂತರಂಗದೊಳು ದಶಚಕ್ರದೊಳು । ಕಳೆಧರನ ಅನುಭಾವವರಿದು ಅರ್ಚಿಸುತಲಿಹ। ಫಲಪದವನೊದೆದು ಮಲರಹಿತನೊಳಗೊಡೆವೆರೆವ ಸುಲಭರಿದನಾಲಿಸುವುದು ; ॥ ೧ ॥

**ಟೀಕುಃ**— ಹಲವು ಕೆಲವು ವ್ರತ ಐವತ್ತಾರು ವ್ರತಂಗಳು ಶೀಲ ಅರುವತ್ತುನಾಲ್ಕು ಶೀಲಂಗಳು ನಿಯಮ ಮೂವತ್ತಾರು ನಿಯಮಂಗಳು ಕುಲವು ನೂರೊಂದರೊಳು ಏಕೋತ್ತರ ಶತಜಾತಿಗಳೊಳಗೆ ಛಲ ಈ ಲೌಕಿಕ ಮಾರ್ಗವಾದ ಶೀಲ ವ್ರತ ನಿಯಮಂಗಳ ಹಿಡಿದು ನೂರೊಂದು ಕುಲದವರು ವರ್ತಿಸುತ್ತಿರುವಲ್ಲಿ ಆ ಶೀಲವ್ರತ ನಿಯಮಂಗಳು ಪ್ರಮಾದವಶದಿಂ ತಪ್ಪಿದಲ್ಲಿ ಪ್ರಾಣವ ಬಿಟ್ಟಹೆನೆಂಬ ಭಾಷೆಗಳೆಂಬುದೇ ಛಲ ಹಿಡಿದು ಇಂತಪ್ಪ ಛಲ ನಿಯಮಂಗಳ ಹಿಡಿದು ಹೊಲಬುಗೆಡುವರಿಗೆ ಇಂತಪ್ಪ ದುಃಶೀಲ ದುರ್ವ್ರತ ದುರ್ನಿಯಮಂಗಳಲ್ಲಿ ನಡೆವಂಗೆ ಮೋಕ್ಷ ಮಾರ್ಗವು ತಪ್ಪಿ ಭವವತ್ತ ಭವಾರಣ್ಯ ಪ್ರವೇಶಿಗಳಾಗಿ ಜನನ ಮರಣ ಬಾಧೆಗಳಿಂ ತೊಳಲುವವರಿಗೆ ಇದು ಇಂತಪ್ಪ ಲಿಂಗಾಂಗ ಸಾಮರಸ್ಯ ಮಾರ್ಗವು ಅಳವಡದು, ಆ ಪ್ರಪಂಚಿಗಳಿಗಸಾಧ್ಯವಾಗಿರ್ಪುದು. ಗುರುಲಿಂಗ ಜಂಗಮದಿ ಅಂತರಂಗ ಬಹಿರಂಗದ ಭಿನ್ನತ್ವವನ್ನು ಕಳೆದು ಇಷ್ಟ ಪ್ರಾಣ ಭಾವಲಿಂಗಗಳನು ತೋರಿ ಉಪದೇಶವ ಮಾಡಿದಂಥ ಆಚಾರ್ಯನು ಲಿಂಗ ಸ್ಥಲಾಂಗದಲ್ಲಿ ಇಷ್ಟಲಿಂಗವೆಂದು ಸೂಕ್ಷ್ಮಾಂಗದಲ್ಲಿ ಪ್ರಾಣಲಿಂಗವೆಂದು ಕಾರಣಾಂಗದಲ್ಲಿ ಭಾವಲಿಂಗವೆಂದು ಸಂಬಂಧಿಸಿ ಒಳ ಹೊರಗೆ ಬೆಳಗುವದೇ ಚಿದ್ಬ್ರಹ್ಮವು, ಜಂಗಮವು, ಇಂತಪ್ಪ ಲಿಂಗಾಂಗಗಳನು ಗರ್ಭೀಕರಿಸಿಕೊಂಡಿರ್ಪ ನಿರಂಜನ ಜಂಗಮದಲ್ಲಿ ತಲ್ಲೀಯ್ಯ. ಆ ಗುರುಲಿಂಗಜಂಗಮಕ್ಕೆ ಭಕ್ತಿಯ ಮಾಡಿ ಆ ಗುರುಲಿಂಗ ಜಂಗಮದಲ್ಲಿಯೇ ಬೆರೆವ ಕ್ರಮವೆಂತೆಂದೊಡೆ ಗುರುವಿಂಗೆತನುವನಿತ್ತು, ಲಿಂಗಕ್ಕೆ ಮನವನಿತ್ತು, ಜಂಗಮಕ್ಕೆ ಧನವನಿತ್ತು, ಮತ್ತಾ ಗುರುಲಿಂಗ ಜಂಗಮ ಸೇವೆಯಲ್ಲಿ ಲೀಯವಾಗಿ ಒಳಹೊರಗೆ ಅಂತರಂಗ ಬಹಿರಂಗದಲ್ಲಿ ಒಂದೆಂಬುವಗೆ ಉಪದೇಶಿಸಲೋಸುಗ ಗುರುವಾಗಿ ಬಂದಾತನು ಪೂಜೆಗೋಸ್ಕರ ಲಿಂಗ

ವಾಗಿ ಬಂದಾತನು ಭಕ್ತಿಯ ಕೈಕೊಳ್ಳುವದಕ್ಕೋಸ್ಕರ ಜಂಗಮವಾಗಿ ಬಂದಾತನು ಈ ತ್ರಿವಿಧ ಭಕ್ತಿಯ ಮಾಡಲೋಸುಗ ಭಕ್ತ ಪದಾರ್ಥವಾಗಿ ಬಂದದ್ದೂ ಒಂದೇ ವಸ್ತುವೆಂದಾರಾಧಿಸುವ ಶರಣಂಗೆ ಸಲ್ಲುವದಿದು, ಇಂತಪ್ಪ ಶರಣಂಗೆ ಈ ಲಿಂಗಾಂಗ ಸಂಬಂಧವಾದ ಪ್ರಾಣಲಿಂಗೋಪದೇಶವು ಸಲ್ಲುವದಲ್ಲದೆ ಮಿಕ್ಕ ಜಡಜೀವರಿಗೆ ಸಲ್ಲವೆಂಬುದರ್ಥ. ಅಂತರಂಗದೊಳು ಸೂಕ್ಷ್ಮಾಂಗವೆಂಬ ಕಾರಣಾಂಗವೆಂಬ ಜ್ಞಾನಾಂಗದಲ್ಲಿ ದಶಚಕ್ರದೊಳು ಆಧಾರಾದ್ಯಣುವಂತ್ಯವಾದ ಹತ್ತು ಚಕ್ರಂಗಳೊಳಗೆ ಕಳೆಧರನ ಚಂದ್ರ ಚೂಡನಾದಂಥ ಪರಶಿವನ ಅನುಭಾವ ಆಧಾರಾದಿ ಅಣುವಾಂತ್ಯವಾದ ಚಕ್ರಂಗಳಲ್ಲಿ ಆಚಾರಾದಿ ನಿರವಯಾಂತ್ಯವಾದ ದಶ ಲಿಂಗಗಳ ನಾಮಾಂಗಳಿಂದಲಾ ಪರಶಿವನಿರುತಿರ್ಪನೆಂಬ ಭೇದವನ್ನು ಅರಿದು ಗುರುಮುಖದಿಂದೆ ತಿಳಿದು ಅರ್ಚಿಸುತ್ತಲಿಹ ಆಯಾಯ ಲಿಂಗಂಗಳ ಸ್ಥಾನ, ಅಂಗ, ಹಸ್ತ, ಲಿಂಗ,ಮುಖ, ಕಮಲಕರ್ಣಿಕ, ಕಮಲದಳ, ಪ್ರಣವ ಮಂತ್ರ, ಭೇದ, ಪದಾರ್ಥ ಮುಂತಾಗಿ, ಮನೋಹಸ್ತದಿಂ ಪೂಜಿಸುತ್ತಿರುವಂಥ ಫಲ. ಇಹದಲ್ಲಿ ದಾನಧರ್ಮ ಪರೋಪಕಾರ ಭಾವಿ ತಟಾಕ ಅರವಟಿಗೆ ಅನ್ನಛತ್ರ ಮುಂತಾದ ಧರ್ಮ ಕಾರ್ಯಂಗಳ ಮಾಡಿದಾತನು ಇಹದಲ್ಲಿ ಮರಳಿ ಹುಟ್ಟಿ ಒಂದಕ್ಕೆ ನೂರ್ಮಡಿ ಸಹಸ್ರ ಮಡಿಯಾಗಿ ಆ ಪುಣ್ಯ ಫಲವನನುಭವಿಸುವಂಥಾದ್ದೇ ಫಲ ಪದ, ಅಂತರಂಗದಲ್ಲಿ ಪ್ರಾಣ ಲಿಂಗವನು ತಿಳಿದು ಮಾನಸದಿಂದೆ ಪೂಜೆಯಂ ಮಾಡಲರಿಯದೆ ಬಹಿರಂಗದಿಷ್ಟ ಲಿಂಗಾರ್ಚನೆಯಂ ನಿಷ್ಠೆಯಿಂ ಮಾಡಿದವರು ಜಪ ತಪ ಅಶ್ವಮೇಧಾದಿ ಯಜ್ಞ ಕರ್ಮಂಗಳಂ ಮಾಡಿದವರು ಗುರುಲಿಂಗ ಜಂಗಮವನು ಭಿನ್ನ ವಿಟ್ಟಾರಾಧಿಸಿದವರು ತಮ್ಮ ಇಷ್ಟವಾದ ದೇವ ಲೋಕದಲ್ಲಿ ಇದೇ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವೆಂಬ ಚತುರ್ವಿಧ ಪದಂಗಳ ಅನುಭವಿಸಿ ಮಾಳಿ ಭವದತ್ತ ಇಹಲೋಕಕ್ಕೆ ಬಂದು ಹುಟ್ಟುವರು ಎಂಬುದೀಗ ಫಲಪದತತ್ವ ಲಕ್ಷಣ, ಇಂತಪ್ಪ ಫಲ ಪದಂಗಳು ಭವಕ್ಕೆ ಬೀಜವೆಂದರಿದು ಇವುಗಳನ್ನು ಒದೆದು ಇಂತಪ್ಪ ಫಲಪದಂಗಳನು ಜ್ಞಾನ ಚರಣದಿಂ ಕೊಡಹಿ, ಮಲರಹಿತನೊಳಗೊಡನೆರೆವ ಆಣವ ಮಲ ಮಾಯಾಮಲ ಕಾರ್ಮಿಕ ಮಲವೆಂಬ ಮಲತ್ರಯವ ವಿರಹಿತನಾದ ನಿರ್ಮಲ ಪರಶಿವನಲ್ಲಿ ಲಯವಾಗುವಂಥ ಸುಲಭರು ಗುರುಲಿಂಗ ಜಂಗಮವು ಬೇರೆ, ತಾನು ಬೇರಾಗಿ, ತನ್ನ ಪದಾರ್ಥ



ವೆಂದಿದಿರಿಟ್ಟುಕೊಂಡು ಆಯಾಸದಿಂದ ಭಕ್ತಿಯ ಮಾಡುವರೇ ಅಸುಲಭರು. ಇದನುಳಿದು ಗುರುಲಿಂಗ ಜಂಗಮವಾದುದು, ಭಕ್ತಿ ಪದಾರ್ಥವಾದುದು, ಶರಣನಾದುದು ಒಂದೇ ವಸ್ತುವೆಂದರಿದು ತಾನು ತಾನಾಗಿ ಭಕ್ತಿಯ ಮಾಡುವವರೇ ನಿರಾಯಾಸವುಳ್ಳಂಥ ಸದ್ಭಕ್ತರೇ ಸುಲಭರು. ಇದನಾಲಿಸುವುದು ಇಂತಪ್ಪ ಪ್ರಾಣಲಿಂಗದ ಸಕೀಲು ಮಾದಂಥ ಇಪ್ಪತ್ತೇಳು ಪದಂಗಳಲ್ಲಿ ಹೇಳುವಂಥ ಪ್ರಾಣಲಿಂಗ ಜ್ಞಾನದರ್ಪಣ ಚಾರಿತ್ರವನ್ನು ಪೇಳುವುದೆಂಬಲ್ಲಿ ಉಳಿದ ಲೌಕಿಕರ್ಗೆ ಪೇಳಲಾಗದೆಂಬುದೀಗ ಈ ಪದದ ತಾತ್ಪರ್ಯಾರ್ಥ ॥ ೨ ॥

ಪದಃ— ಬಸವ ಮೊದಲಾದ ಪರಮಜ್ಞಾನ ಪರಿಪೂರ್ಣ।ವಸಮವಜಗಣ್ಣ ಗೊಗ್ಗಯ್ಯ ಮುಕ್ತಾಯಕ್ಕ । ಪೆಸರ್ವಡೆದ ಮಡಿವಳಯ್ಯ ಕಿನ್ನರಿಯ ಬ್ರಹ್ಮಯ್ಯ ಹಸುಳೆ ಉಡುತಡಿ ದೇವಿಗೆ॥ಬಿಸಿಗಣ್ಣ ಸಿದ್ಧರಾಮಗೆ ಮರುಳ ಶಂಕರಗೆ । ಸಸಿನೆ ಶ್ರೋತ್ರದೊಳೊಗೆದ ಚನ್ನಬಸವೇಶ್ವರಗೆ । ಒಸೆದು ಪ್ರಭುವಿತ್ತ ಷಟ್‍ಸ್ಥಲ ಜ್ಞಾನದ.ಪದೇಶ ಪಸರಿಸುವ ದರ್ಪಣವಿದು. ॥

ಟೀಕುಃ— ಬಸವ ಮೊದಲಾದ ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣವೆಂಬ ಪಂಚಲಕ್ಷಣ ಸ್ವರೂಪವಕ ಮಹಾಘನ ಪರಿಪೂರ್ಣವಾದ ಪರಶಿವನೇ ಸರ್ವಾಚಾರ ಸಂಪತ್ತಿನಾಚರಣೆಯ ಮಾಂದುಗೊಂಡು ಬಂದು ಶರಣಸ್ವರೂಪವಾಗಿ ಬಸವೇಶ್ವರನೆಂಬ ನಾಮದಿ ಪ್ರಮಥ ಗಣನಾಯಕನಾದ ಬಸವೇಶ್ವರ ದೇವರು ಮುಖ್ಯವಾಗಿ ಎಂಬುದೀಗ ಬಸವ ಮೊದನಾದ ಪರಮಜ್ಞಾನ ಪರಿಪೂರ್ಣ ಉತ್ಕೃಷ್ಟವಾದಂಥ ಮಹಲಿಂಗವನು ಮರಹಿಲ್ಲದೆ ಅರುಹುಳ್ಳವರಾಗಿ ಆ ಅರುಹೇ ಲಿಂಗಸ್ವರೂಪವಾಗಿ ಅಂಗದಲ್ಲಿ ಭರಿತವಾದಂಥ ಅಸಮ ಅಜಗಣ್ಣ ಅಜಗಣ್ಣನೆಂಬ ನಾಮವನುಳ್ಳ ವೇಪಿ ೭೭೦ ಗಣಸಂಕುಳದೊಳಗಾಗಿ ನ ದ್ವಿತೀಯವೆಂಬುದೀಗ ಅಂತಪ್ಪ ಅಜಗಣ್ಣನೆಂಬ ಶರಣಂಗೆ ಗೊಗ್ಗಯ್ಯ ಗೊಗ್ಗಯ್ಯನೆಂಬ ಶರಣಂಗೆ ಮುಕ್ತಾಯಕ್ಕಗೆ ಮುಕ್ತಾಯಕ್ಕನೆಂಬ ಶರಣೆಗೆ ಪೆಸರ್ವಡೆದ ಮಡಿವಳಯ್ಯ ಬಸವೇಶ್ವರ ದೇವರಿಗೆ ಭಕ್ತಿಜ್ಞಾನವನರುಹಿಸಿ ಕೊಟ್ಟು ಕೀರ್ತಿವೆತ್ತಂಥ ಮಡಿವಳಯ್ಯನೆಂಬ ಶರಣಂಗೆ ಕಿನ್ನರಿಯ ಬ್ರಹ್ಮಯ್ಯ ತ್ರಿಪುರಾಂತಕ ಲಿಂಗವನು ಮಾತನಾಡಿಸಿದಂಥ ಕಿನ್ನರಿಯ ಬ್ರಹ್ಮಯ್ಯನೆಂಬ ಶರಣಂಗೆ

ಹಸುಳೆ ಉಡುತಡಿದೇವಿಗೆ ಬಾಲ್ಯದಲ್ಲಿ ಭಕ್ತಿ ಜ್ಞಾನ ವೈರಾಗ್ಯ ಪುಟ್ಟಿ ಶಿವನಲ್ಲಿ ಬೆರಸಿದಂಥ ಉಡುತಡಿಯ ಮಹಾದೇವಿಯೆಂಬ ಶರಣೆಗೆ ಬಿಸಿಗಣ್ಣ ಸಿದ್ಧರಾಮಯ್ಯಂಗೆ ಹಣೆಯಲ್ಲಿ ಉರಿಗಣ್ಣುಳ್ಳಂಥ ಸಿದ್ಧರಾಮಯ್ಯನೆಂಬ ಶರಣಂಗೆ ಮರುಳು ಶಂಕರಗೆ ಲಿಂಗ ಪ್ರಸಾದವೇ ತನಗೊಡಲಾಗುಳ್ಳಂಥ ಮರುಳು ಶಂಕರನೆಂಬ ಶಿವಯೋಗೀಶ್ವರಂಗೆ ಸಸಿನೆ ಶ್ರೋತ್ರದೊಳೊಗೆದ ಆಯಾಸವಿಲ್ಲದೆ ಅಕ್ಕನಾಗಮ್ಮನೆಂಬ ಶರಣೆಯ ಕರ್ಣದಲ್ಲುದಿಸಿದ ಚನ್ನಬಸವೇಶ್ವರಂಗೆ ಷಟ್ ಸ್ಥಲ ಜ್ಞಾನ ಚಕ್ರವರ್ತಿಯಾದಂಥ ಚನ್ನಬಸವೇಶ್ವರ ದೇವರಿಗೆ ಇಂತಪ್ಪ ಬಸವೇಶ್ವರ ದೇವರು ಮುಖ್ಯವಾಗಿ ಚನ್ನ ಬಸವೇಶ್ವರ ದೇವರು ಅಂತ್ಯವಾದ ದಶಗಣಂಗಳಿಗೆ ಒಸೆದು ಈ ಗಣಂಗಳ ಮೇಲಣ ಪ್ರೀತಿಯಿಂದೆ ಪ್ರಭುವಿತ್ತ ನಿರವಯ ಬ್ರಹ್ಮವೇ ಪ್ರಭುಸ್ವಾಮಿ ಎಂಬ ನಾಮ ಪಿಡಿದು ಬಂದು ಕೊಟ್ಟಂಥಾ ಷಟ್ಸ್ಥಲಜ್ಞಾನದ ಷಡಾಧಾರ ಚಕ್ರಂಗಳಲ್ಲಿಯು ಷಡ್ವಿಧ ಲಿಂಗದನುಭಾವವನರುಹಿಸಿ ತೋರಿ, ಉಪದೇಶ ಮೇಲಣ ಬ್ರಹ್ಮಚಕ್ರ ಶಿಖಾಚಕ್ರ ಪಶ್ಚಿಮಚಕ್ರ ಅಣು ಚಕ್ರದಲ್ಲಿರುವಂಥ ಲಿಂಗಂಗಳ ಸಕೀಲಂಗಳನನುಗ್ರಹವ ಮಾಡಿದಂಥ ಪಸರಿಸುವ ದರ್ಪಣವಿದು, ನಿರ್ಮಳ ತರವನುಳ್ಳಂಥ ವಿಶಾಲೋನ್ನತವಾಗಿ ಪ್ರಕಾಶಿಸುವಂಥ ಕನ್ನಡಿಯ ಪಿಡಿದುಕೊಂಡು ತನ್ನ ತಾನೇ ನೋಡಲಾಗಿ ತನ್ನವಯವಂಗಳೆಲ್ಲವು ಕಾಣಬರುವಹಾಗೆ ಈ ಇಪ್ಪತ್ತೇಳು ಪದದಿಂ ಕೂಡಿದ ಚಾರಿತ್ರ್ಯವೆಂಬ ಕೈಪಿಡಿಯಲ್ಲಿ ಅನುಭವ ಜ್ಞಾನ ದೃಷ್ಟಿಯಿಂದೆ ನೋಡಲಾಗಿ ತನ್ನಂತರಂಗದೊಳಗಣ ಪ್ರಾಣಲಿಂಗಂಗಳನಚರಿಸುವ ಸಕೀಲಂಗಳು ಕಾಣಬರುತ್ತಿಹುದೆಂಬುದೀಗ ಈ ಪದದ ತಾತ್ಪರ್ಯಾರ್ಥ ॥೩॥

ಪದ:— ಆಧಾರ ಚಕ್ರದೊಳು ವೇದಿಸೀ ಶರೀರದಿಂ । ದಾದ ಭಕ್ತಾಚಾರ ಲಿಂಗಕ್ಕೆ ಗುದಸ್ಥಾನವಾದ ಚೌಕೋಣೆ ಚೌದಳದ ಚತುಃ ಪ್ರಣವದಿಂ ಪೀತ ವರ್ಣದ ಕಮಲದಿ ॥ ಅಧರಿಸಿ ಸುಚಿತ್ತ ಹಸ್ತದಿ ಘ್ರಾಣ ಮುಖದಿಂದೆ । ನೋದ ಗಂಧವನಿತ್ತು ಆ ಪ್ರಸಾದವ ಕೊಂಬ। ಸಾಧಕನೆ ಮುಕ್ತನೆಂದೋದಿ ಸಾರುತ್ತಿಹುದು ನಾದಬ್ರಹ್ಮದ ವಾಕ್ಯವೂ॥

ಟೀಕು: - ಆಧಾರ ಚಕ್ರದೊಳು ಮೂಲಾಧಾರ ಚಕ್ರದಲ್ಲಿ ವೇದಿಸಿ ಶರೀರದಿಂದಾದ ಭಕ್ತ ಪೃಥ್ವಿಯಾಳಿದು ಚಿತ್ತಪೃಥ್ವಿಯೇ ಅಂಗ



ವಾದ ಸದ್ಭಕ್ತನು ಆಚಾರಲಿಂಗಕ್ಕೆ ಒಂದು ಕೋಟಿ ಬಾಲಸೂರ್ಯ ಪ್ರಕಾಶವನುಳ್ಳಂಥ ನಕಾರ ಮಂತ್ರ ಮೂರ್ತಿ ಆಚಾರಲಿಂಗಕ್ಕೆ ಗುದಸ್ಥಾನ ಆ ಹೇಳಿದಾಧಾರ ಚಕ್ರವು ಹಿಂದೆ ಹೇಳಿದ ಆಧಾರ ಚಕ್ರವು ಗುದಸ್ಥಾನದಲ್ಲಿರ್ಪುದುವಾದ ಚೌಕೋಣೆ ಆಚಾರ ಲಿಂಗಕ್ಕೆ ಆಧಾರ ಚಕ್ರದಲ್ಲಿ ಗರ್ಭ ಗೃಹವಾದ ನಾಲ್ಕು ಕೋಣೆಯು ।ಚೌದಳ ಎಸಳುಗಳು ಚತುಃ ಪ್ರಣವು ಆ ನಾಲ್ಕು ಎಸಳುಗಳಲ್ಲಿ ವ. ಶ. ಷ. ಸ. ಎಂಬ ನಾಲ್ಕು ಅಕ್ಷರಂಗಳಿಂದೆ ಪೀತವರ್ಣದ ಹಳದೀ ಬಣ್ಣದ ಕಮಲದಿಂ ಆ ನಾಲ್ಕು ದಳ ಕಮಲದ ಕರ್ಣಿಕೆಯ ಮಧ್ಯದಲ್ಲಿ ಅಧರಿಸಿ ಆ ಕರ್ಣಿಕಾ ಮಧ್ಯದಲ್ಲಿರುವಾಚಾರ ಲಿಂಗಕ್ಕೆ ನಕಾರವೇ ಬೀಜ ಪ್ರಣವವೆಂಬುದನು ಆ ನಾಲ್ಕು ದಳದಲ್ಲಿರುವ ನಾಲ್ಕಕ್ಷರಂಗಳೇ ಅಧಿದೇವತೆ ಅವರ ಶಕ್ತಿಯರನು ಚೆನ್ನಾಗಿ ವಿವರಿಸಿ ಸುಚಿತ್ತ ಹಸ್ತದಿ ಆ ಲಿಂಗದ ಮೇಗಣ ಚಿತ್ತವೆಂಬ ಸುಚಿತ್ತ ಹಸ್ತದಿಂದ ಘ್ರಾಣ ಮುಖದಿಂದ ಜ್ಞಾನೇಂದ್ರಿಯವೆಂಬ ನಾಸಿಕವೇ ಆಚಾರ ಲಿಂಗಕ್ಕೆ ವದನವಾದ ಕಾರಣ ಆ ನಾಸಿಕದ ಮುಖದಿಂದವೇ ವೋದ ಗಂಧವ ತನಗೆ ಇಂಪಾದ ಸುಗಂಧ ಪದಾರ್ಥವನು ಇತ್ತು ಓಂ ನಮಃಶ್ಶಿವಾಯ: ಓಂ ಹ್ರಾಂ ನಕಾರ ಮೂರ್ತಯೇ ಎಂಬ ಮಂತ್ರ ಸ್ಮರಣೆಯಿಂದ ಆ ಆಚಾರ ಲಿಂಗಕ್ಕೆ ಆ ಸುಗಂಧ ಪದಾರ್ಥವ ಕೊಟ್ಟು ಆ ಪ್ರಸಾದವ ಕೊಂಬ ಆ ಲಿಂಗಕ್ಕೆ ಕೊಟ್ಟ ಗಂಧವನ್ನು ತನಗೆ ಪರಿಣಾಮವಾಗುವ ಪರಿಯಂತರ ಆ ಲಿಂಗಮಂತ್ರದಿಂ ಧ್ಯಾನಿಸಲದುವೇ ಲಿಂಗಪ್ರಸಾದವೆನಿಸುವದು. ಅಂಥಾ ಆಚಾರಲಿಂಗ ಪ್ರಸಾದವನು ಸ್ವೀಕರಿಸುವಂಥ ಸಾಧಕನೇ ಆ ಲಿಂಗಕ್ಕೆ ಇಂತಪ್ಪಾರಾಧನೆಯ ಮಾಡುವಂಥ ಸದ್ಭಕ್ತ ಪುಂಗವನೇ ಮುಕ್ತನೆಂದು ಆ ಆಚಾರಲಿಂಗದಲ್ಲಿಯೇ ಆ ಭಕ್ತನು ಐಕ್ಯನಾಗುವನೆಂದು ಓದಿ ಸಾರುತ್ತಿಹುದು ಉಚ್ಚರಿಸಿ ಉಸುರುತ್ತಿಹುದು ನೋಡು ಅನಾದಿ ಬ್ರಹ್ಮದ ವಾಕ್ಯವು. ಶಿವರಹಸ್ಯದಲ್ಲಿ ಪರಶಿವನು ಪಾರ್ವತಾದೇವಿಗೆ ಹೇಳಿದಂಥಾ ಶಿವರಹಸ್ಯದಲ್ಲಿಯ ಮಹಾವಾಕ್ಯವೆಂಬುದೀಗ ಪದದ ತಾತ್ಪರ್ಯಾರ್ಥ ॥ ೪ ॥

ಇದಕ್ಕೆ ಸಾಕ್ಷಿ: — ಶ್ಲೋಕ ॥ ಸುಚಿತ್ತ ಹಸ್ತ ಭೂಮ್ಯಾಂಗಂ ಭಕ್ತಸ್ಯಾಚಾರ ಲಿಂಗಿನಃ ಘ್ರಾಣೇಚ ತನ್ಮುಖೇ. ಗಂಧಮರ್ಪಿತಂ ತೃಪ್ತಿ ಭೋಕ್ತವಾನ್ ಭೋಗಿನಃ ॥ ೧ ॥

**ತಾತ್ಪರ್ಯ:**— ಚಿದ್ಭೂಮಿಯೇ ಅಂಗವಾದ ಭಕ್ತನು ಸುಚಿತ್ತವೆಂಬ ಹಸ್ತದಿಂದ ಆಚಾರ ಲಿಂಗಕ್ಕೆ ನಾಸಿಕೇಂದ್ರಿಯ ಮುಖದಲ್ಲಿ ಗಂಧವನು ಸಮರ್ಪಣೆ ಮಾಡಿ ಆ ಪ್ರಸಾದವನೇ ಭೋಗಿಸಿ ತೃಪ್ತನಹನೆಂಬರ್ಥ ॥ ೩ ॥

**ಪದ:**— ಮತ್ತೆ ಗುಹ್ಯಸ್ಥಾನ ಧನುರ್ಗತಿಯ ಸ್ವಾಧಿಷ್ಠಾನ। ಕರ್ತೃ ಮಾಹೇಶ್ವರಗೆ ಅಪ್ಪು ತತ್ವದ ದೇಹ। ಹಸ್ತಂ ಸುಬುದ್ಧಿಯಿಂದಿತ್ತು ಗುರುಲಿಂಗಕ್ಕೆ ವಾರಿ ವರ್ಣದ ಕಂಜದಿಂ॥ ತಥ್ಯ ಷಟ್ ಪ್ರಣವ ಷಡ್ದಳದ ಮಧ್ಯದೊಳಿಪ್ಪ। ಅತ್ಯಧಿಕ ಲಿಂಗಕ್ಕೆ ರಸನೆ ಮುಖದಿಂದೀವ। ಪಥ್ಯ ಷಡ್ರಸ ಪ್ರಸಾದವ ಕೊಂಬ ಮಹೇಶ ವರ್ತಿಸುವ ಪರಬ್ರಹ್ಮದಿ॥

**ಟೀಕು:**— ಮತ್ತೆ ಆಧಾರ ಚಕ್ರದ ಗುದಸ್ಥಾನದಿಂ ಮೇಲೆ ಗುಹ್ಯಸ್ಥಾನ, ನಾಲ್ಕಂಗುಲ ಪ್ರಮಾಣಿನಲ್ಲಿರುವಂಥ ಲಿಂಗನಾಡಿಯ ಸ್ಥಾನದಲ್ಲಿ ಧನುರ್ಗತಿಯ ಹೆಡೆ ಮೇಲಾಗಿಟ್ಟ ಚಾಪಾಕಾರದಲ್ಲಿರುವಂಥ ಸ್ವಾಧಿಷ್ಠಾನ ಸ್ವಾಧಿಷ್ಠಾನ ವೆನಿಸುವ ಚಕ್ರದ ಕರ್ತೃ ಆ ಚಕ್ರದಧಿಪತಿಯಾದ ಮಹೇಶ್ವರಗೆ ಲಿಂಗ ಭಕ್ತಿಯೊಂದಲ್ಲದೆ ಲೌಕಿಕದ ಮಾಯಾವೃತ್ತಿಯನಳಿದು ವೀರ ಮಹೇಶ್ವರಂಗೆ ಅಪ್ಪು ತತ್ವದ ದೇಹ ವಾಮದೇವ ತತ್ವವಾದ ಚಿಜ್ಜಲವೇ ದೇಹ, ಆ ಚಿಜ್ಜಲವೇ ಅಂಗವಾದ ಹಸ್ತ ಸುಬುದ್ಧಿಯಿಂದೆ ಕುಬುದ್ಧಿಯನಳಿದು ಸುಬುದ್ಧಿಯೆಂಬ ಹಸ್ತದಿಂದ ಇತ್ತು, ನಾನೆಂಬ ಕುಬುದ್ಧಿಯಳಿದು ನೀನೆಂಬ ಮಾನವ ಲಿಂಗದಲ್ಲಿ ಇತ್ತು, ಗುರುಲಿಂಗಕ್ಕೆ ಸ್ವಾಧಿಷ್ಠಾನ ಚಕ್ರದ ಧನುರ್ಗತಿಯ ಗರ್ಭಗೃಹದೊಳಗಿಹ ಎರಡು ಕೋಟಿ ಬಾಲಸೂರ್ಯ ಕಾಂತಿಯುಳ್ಳಂಥ ಮಕಾರ ಮಂತ್ರ ಮೂರ್ತಿಯಾದ ಗುರುಲಿಂಗಕ್ಕೆ, ವಾರಿವರ್ಣದ ಅಪ್ಪುವಿನ ಶ್ವೇತ ಪ್ರಕಾಶದ ಕಂಜದಿಂ ಕಮಲದಿಂದೆ ತಥ್ಯ ಯಥಾರ್ಥವಾದ ಷಟ್ ಪ್ರಣವ ಬ, ಭ, ಮ, ಯ ರ ಲ ಎಂಬುವ ಆರಕ್ಷರಂಗಳು ಷಡ್ದಳದ ಆ ಶ್ವೇತ ವರ್ಣದ ಕಮಲಕ್ಕೆ ಆರೆಸಳುಗಳಿರ್ಪವು. ಆ ಎಸಳುಗಳ ಮಧ್ಯದೊಳಿಪ್ಪ ಆ ಷಡ್ದಳ ಪ್ರಣವಂಗಳ ಮಧ್ಯ ಕರ್ಣಿಕೆಯಲ್ಲಿರುವಂಥ ಅತ್ಯಧಿಕ ಲಿಂಗಕ್ಕೆ ಚಕ್ರಕ್ಕಧಿಪತಿಯಾದ ಅತ್ಯುನ್ನತವಾದ ಮಕಾರ ಮಂತ್ರ ಮೂರ್ತಿಯಾದ ಗುರುಲಿಂಗಕ್ಕೆ ರಸನೆಮುಖದಿಂದೀವ ಆ ಗುರುಲಿಂಗಕ್ಕೆ ಜ್ಞಾನೇಂದ್ರಿಯೊಳಗಣ ಜಿಹ್ವೆಯೇ ಪಕ್ವವಾದ ಕಾರಣ ಆ ಜಿಹ್ವೆ ಮುಖದಿಂದ ಕೊಡು



ವಂಥ ಪಥ್ಯ ಅನ್ನ ಪಾನಾದಿಗಳು ಮುಖ್ಯವಾದ ಷಡುರಸ ಮಧುರ ಒಗರು ಖಾರ ಹುಳಿ ಕಹಿ ಲವಣವೆಂಬಾರು ರಸಂಗಳನು ಗುರುಲಿಂಗಕ್ಕೆ ಷಡಕ್ಷರ ಸ್ಮರಣೆಯಿಂದ ಓಂ ಹ್ರೀಂ ಮಕಾರ ಮಂತ್ರ ಮೂರ್ತಿ ಗುರುಲಿಂಗವೇ ನಿಮಗರ್ಪಿತವೆಂದು ಇತ್ತು ಅರ್ಪಿಸಿ ಪ್ರಸಾದವ ಕೊಂಬ. ಇಂತು ಲಿಂಗ ಸ್ಮರಣೆಯಿಂದ ಸ್ವೀಕರಿಸಲು ಅದು ಆ ಲಿಂಗ ಪ್ರಸಾದವೆನಿಸುವದು. ಅಂತಪ್ಪ ರಸ ಪ್ರಸಾದವನು ಭೋಗಿಸುವಂಥ ಮಾಹೇಶವೀರ ಮಾಹೇಶ್ವರನು ವರ್ತಿಸುವ ಪರಬ್ರಹ್ಮದಿ ಆ ಪರಶಿವನಲ್ಲಿಯೇ ಬೆರಿಸುವನೆಂಬುವದರ್ಥ. ॥ ೪ ॥

ಇದಕ್ಕೆ ಸಾಕ್ಷಿ:— ಶ್ಲೋ ॥ ಮಾಹೇಶ್ವರೋ ಜಲಾಂಗಶ್ಚ ಬುದ್ಧಿಹಸ್ತೇನ ಸದ್ಗುರು: । ಜಿಹ್ವೆ ಮುಖೇ ರಸಂ ಸ್ವಾದಂ । ಅರ್ಪಿತಂ ತೃಪ್ತಿ ಭೋಕ್ತೃವಾನ್॥

ತಾತ್ಪರ್ಯ:— ಚಿಜ್ಜಲವೇ ಅಂಗವಾದ ಮಹೇಶ್ವರನು ಸುಬುದ್ಧಿಯೆಂಬ ಹಸ್ತದಿಂದ ಗುರುಲಿಂಗಕ್ಕೆ ರಸ ಪದಾರ್ಥವನು ಜಿಹ್ವೇಂದ್ರಿಯವೆಂಬ ಮುಖದಲ್ಲಿ ಸಮರ್ಪಣೆಯಂ ಮಾಡಿ ಆ ಪ್ರಸಾದ ತೃಪ್ತಿಯನೇ ಭೋಗಿಸುತಿಹನೆಂಬುದರ್ಥ ॥ ೪ ॥

---

॥ ಪದ ॥ ಮಣಿಪೂರಕ ಚಕ್ರನಾಭಿಯ ತ್ರಿಕೋಣೆಯೊಳಿರ್ಪ ಅನಿಲ ಸಖ ಶರೀರ ನಿರಹಂಕಾರ ಹಸ್ತದಿಂ ಘನ ಪ್ರಸಾದಿಯು ದಶದಳದ ಪದ್ಮದಶ ಪ್ರಣವಮದೆಸವುತಿಹುದದರ ಮಧ್ಯದಿ ॥ ದಿನ ಕೋಟಿ ತ್ರಿವಿಧ ಪ್ರಕಾಶ ಶಿವಲಿಂಗಕ್ಕೆ । ಮನವೊಲಿದು ನೇತ್ರ ಮುಖದಿಂದೆ ರೂಪಾರ್ಪಿಸುತೆ । ಅನುಪಮ ಪ್ರಸಾದವನು ಕೊಂಬ ಪ್ರಸಾದಿಯೇ ಚಿನುಮಯನೊಳೈಕ್ಯಮೆನಸಲು ॥

ಟೀಕು ॥ ಮಣಿಪೂರಕ ಚಕ್ರ ಆ ಸ್ವಾಧಿಷ್ಠಾನ ಚಕ್ರದಿಂ ಮೇಲೆ ಆರಂಗುಲ ಪ್ರಮಾಣಿನಲ್ಲಿರುವದೇ ಮಣಿಪೂರಕ ಚಕ್ರ. ನಾಭಿಯ ಹೊಕ್ಕಳ ಸ್ಥಾನದಲ್ಲಿರ್ಪುದೀಗ ಮಣಿಪೂರಕ ಚಕ್ರವು ತ್ರಿಕೋಣೆಯೊಳು ಗರ್ಭ ಗೃಹದಲ್ಲಿರ್ಪ ಆ ಗರ್ಭ ಗೃಹವೇ ನೆಲೆಮನೆಯಾಗಿರುವಂಥ ಅನಿಲ ಸಖ ಮಾರುತಂಗೆ ಸ್ನೇಹಿತನಾದ ಅಗ್ನಿಯೇ ಶರೀರ ಆ ಚಿದಗ್ನಿಯೇ

ಅಂಗವಾದ ನಿರಹಂಕಾರ ಹಸ್ತದಿಂ ನಾನೆಂಬುವಹಂಕಾರವಳಿದು ಲಿಂಗವೇ
ಯೆಂಬ ನಿರಹಂಕಾರವಾದಂಥ ಹಸ್ತದಿಂ ಅಂತಪ್ಪ ನಿರಹಂಕಾರವೆಂಬ
ಪಾಣಿಯಿಂದೆ ಘನ ದೊಡ್ಡಿತ್ತಾದ ಪ್ರಸಾದಿಯು ಆ ಚಿದಗ್ನಿಯೇ ಅಂಗ
ವಾದ ಶಿವ ಪ್ರಸಾದಿಯು ದಶದಳದ ಹತ್ತೆಸಳನುಳ್ಳಂಥ ಪದ್ಮ ಆ ಹತ್ತೆ
ಸಳನುಳ್ಳಂಥ ಕುಂಕುಮ ವರ್ಣದ ಕಮಲದಲ್ಲಿ ದಶ ಪ್ರಣಮು ಆ ಹತ್ತು
ದಳಂಗಳಲ್ಲಿರುವ ಡ ಢ ಣ, ತ ಥ ದ ಧ ನ, ಪ ಫ ಎಂಬ ಹತ್ತು ಅಕ್ಷ
ರಂಗಳು ಎಸೆಯುತಿಹವು ನ್ಯಾಸವಾಗಿರ್ಪವು. ಅದರ ಮಧ್ಯದಿ ಆ
ಕಮಲಕರ್ಣಿಕಾ ಕುಹರ ಮಧ್ಯದಲ್ಲಿ ಇನಕೋಟಿ ತ್ರಿವಿಧ ಪ್ರಕಾಶ
ಮೂರು ಕೋಟಿ ಬಾಲಸೂರ್ಯ ಪ್ರಕಾಶವನುಳ್ಳ ಶಿವಲಿಂಗಕ್ಕೆ ಆ ಕಮ
ಲದ ತ್ರಿಕೋಣೆಯ ಗರ್ಭ ಗೃಹದೊಳಗಿರ್ಪ ಶಿಕಾರ ಮಂತ್ರ ಮೂರ್ತಿ
ಯಾಗಿ ಒಪ್ಪಲ್ಪಟ್ಟಂಥ ಇನಕೋಟಿ ತ್ರಿವಿಧ ಪ್ರಕಾಶ ಮೂರು ಕೋಟಿ
ಬಾಲಸೂರ್ಯನ ಪ್ರಕಾಶವನುಳ್ಳಂಥ ಶಿವಲಿಂಗಕ್ಕೆ ಆ ನಾಭಿಯ ಸ್ಥಾನದ
ಮಣಿಪೂರಕ ಚಕ್ರದಲ್ಲಿ ಕೆಂಪು ವರ್ಣದ ಹತ್ತೆಸಳ ಕಮಲದ ಕರ್ನಿಕ
ಮಧ್ಯದಲ್ಲಿ ತ್ರಿಕೋಣೆಯ ಗರ್ಭಗೃಹದೊಳಗಿರುವಂಥ ಮಾಂಗಲ್ಯ ಸ್ವರೂಪ
ವಾದಂಥ ಶಿಕಾರ ಮೂರ್ತಿ ಶಿವಲಿಂಗಕ್ಕೆ ಮನ ಒಲಿದು ಆ ಶಿವಲಿಂಗದ
ಮೇಲಣ ಭಕ್ತಿಯಿಂದೆ ನೇತ್ರ ಮುಖದಿಂದೆ ನಯನವೆಂಬ ಜ್ಞಾನೇಂದ್ರಿ
ಯವೇ ಶಿವಲಿಂಗಕ್ಕೆ ವದನವಾದ ನಿಮಿತ್ಯ ಆ ನಯನೇಂದ್ರಿಯ ಮುಖ
ದಿಂದವೇ ರೂಪಾರ್ಪಿತಾದಿ ಷಡುವರ್ಣ ರೂಪಂಗಳನು ಅರ್ಪಿಸುವ ಆ
ಶಿವಲಿಂಗಕ್ಕೆ ಷಡಕ್ಷರಿಯ ಮಂತ್ರ ಸ್ಮರಣೆಯಿಂದವೆ ನಿರೀಕ್ಷಣೆಯ ಮಾಡ
ಲಾಗಿ ಅದು ಆ ಶಿವಲಿಂಗದ ಪ್ರಸಾದವೆನಿಸುವದು. ಕೊಂಬ ಆ ಶಿವ
ಲಿಂಗದ ರೂಪು ಪ್ರಸಾದವನು ಸ್ವೀಕರಿಸುವಂಥ ಪ್ರಸಾದಿಯೇ ಅಂತಪ್ಪ
ಶಿವಲಿಂಗ ಪ್ರಸಾದಿಯೇ ಚಿನುಮಯನೊಳೈಕ್ಯವೆನಲು ಆ ಚಿತ ಪ್ರಕಾಶ
ರೂಪವಾದಂಥ ಪರಶಿವನಲ್ಲಿಯೇ ಲೀಯವಾಗುವನೆಂಬುದರ್ಥ.

ಇದಕ್ಕೆ ಸಾಕ್ಷಿ. ಶ್ಲೋ ॥ ನಿರಹಂಕಾರ ಹಸ್ತೇನ ಅನಲಾಂಗ ಪ್ರಸಾ
ದಿಚ ಶಿವಲಿಂಗ ಮುಖೇ ನೇತ್ರೆ ಅರ್ಪಿತಂ ತೃಪ್ತಿ ಭೋಕ್ತೃವಾನ್ ॥ ೧ ॥

**ತಾತ್ಪರ್ಯ:—** ಚಿದಗ್ನಿಯೇ ಅಂಗವಾದ ಪ್ರಸಾದಿಯು ನಿರಹಂ
ಕಾರವೆಂಬ ಹಸ್ತದಿಂದೆ ಶಿವಲಿಂಗಕ್ಕೆ ನೇತ್ರಮುಖದಿಂದೆ ರೂಪ ಸಮ
ರ್ಪಿಸಿ ಆ ತೃಪ್ತಿಯನೇ ಭೋಗಿಸುವನೆಂಬುದರ್ಥ ॥ ೫ ॥

---



॥ **ಪದ** ॥ ಪರಮ ಜಂಗಮ ಲಿಂಗ ಉರದೊಳನಹತ ಚಕ್ರ ।
ಮೆರೆವ ಷಟ್ಕೋಣೆ ಹರಿಯಂಗದಿಂದೆಸೆವುತಿಹ । ವರ ಪ್ರಾಣಲಿಂಗಿಯು
ಸುಮನ ಹಸ್ತದಿಂ ಪಿಡಿದು ॥ ಪರಿ ಪರಿಯ ಸ್ಪರ್ಶನವನು ಹರಿತ ವರ್ಣದ
ತಾ । ವರೆಯ ದ್ವಾದಶದಳಂಗಳೊಳಗಿರುವ ಪ್ರಣಮ । ದಿರುವಿನೊಳು
ರಾಜಿಸುವ ಚರಲಿಂಗ ಮೂರ್ತಿಗಿತ್ತು ಪ್ರಸಾದವ ಕೊಂಬ ಪಿರಿಯ ಸದ್ಯೋ
ನ್ಮುಕ್ತನೂ ॥

**ಟೀಕು** ॥ ಪರಮ ಉತ್ಕೃಷ್ಟವಾದ ಜಂಗಮಲಿಂಗಕೆ ಚರಮೂ
ರ್ತಿಯಾದ ಲಿಂಗಕ್ಕೆ ಉರದೊಳು ಎರಡು ಮೊಲೆ ಕಣ್ಣಿನ ಮಧ್ಯದ
ಎದೆಗುಂಡಿಗೆಯ ಹೃದಯಸ್ಥಾನದಲ್ಲಿ ಅನಾಹತ ಚಕ್ರವು ಆ ಮಣಿಪೂರಕ
ಚಕ್ರದಿಂ ಮೇಲೆ ಎಂಟಂಗುಲ ಪ್ರಮಾಣಿನಲ್ಲಿರುವ ಅನಾಹತ ಚಕ್ರವು
ಮೆರೆವ ಲೀಲಾ ವಿನೋದವ ಮಾಡಲೋಸುಗವಾಗಿ ಶೋಭಿಸುವ
ಷಟ್ಕೋಣೆ ಆ ಚಕ್ರದಲ್ಲಿ ಆರು ಕೋಣೆಯ ಗರ್ಭ ಗೃಹವು ಹರಿ
ಯಂಗದಿಂದೊಪ್ಪುತ್ತಿಹ ಚಿದ್ವಾಯುವೇ ಶರೀರವಾಗಿ ರಂಜಿಸುತ್ತಿರುವ
ವರ ಶ್ರೇಷ್ಠನಾದ ಪ್ರಾಣಲಿಂಗಿಯು ಆ ಜಂಗಮ ಲಿಂಗವೇ ಪ್ರಾಣವಾ
ಗುಳ್ಳ ಲಿಂಗ ಪ್ರಾಣಿಯು ಸುಮನ ಹಸ್ತದಿಂದ ಕುಮನವಳಿದು ಸುಮನ
ಪಾಣಿಯಿಂದೆ ಪಿಡಿದು ಆ ಲಿಂಗಕ್ಕೆ ಕೊಡಬೇಕೆಂಬ ಧೃಡವಿಡಿದು ಪರಿ
ಪರಿಯ ಮೃದು ಕಠಿಣ ಸೀತೋಷ್ಣವೆಂಬ ಹಲವು ಬಗೆಯ ಸ್ಪರ್ಶನವನು
ಸೋಂಕುವ ಪದಾರ್ಥವನು ಹರಿತ ವರ್ಣದ ಧೂಮ್ರ ಛಾಯದ ತಾವ
ರೆಯ ಕಮಲದ ದ್ವಾದಶದಳಂಗಳೊಳಗಿರುವ ಆ ಕಮಲದ ಹನ್ನೆರಡೆಸಳು
ಗಳಲ್ಲಿ ನ್ಯಾಸವಾಗಿರುವ ಪ್ರಣಮದಿರುವಿನೋಳ್ ಕ ಖ ಗ ಘ ಙ ಚ ಛ
ಜ ಝ ಞ ಟ ಠ ಎಂಬ ದ್ವಾದಶ ಅಕ್ಷರಂಗಳಧಿದೇವತಾ ಶಕ್ತಿಯರಲ್ಲಿ
ರಾಜಿಸುವ ಶೋಭಿಸುವ ಚರಲಿಂಗ ಮೂರ್ತಿಗೆ ಆ ಚಕ್ರದ ಧೂಮ್ರ
ವರ್ಣದ ಹನ್ನೆರಡು ದಳದ ಕಮಲದ ಷಟ್ಕೋಣಾಕಾರದ ಗರ್ಭ ಗೃಹ
ದಲ್ಲಿರುವ ೪ ಕೋಟಿ ಬಾಲಸೂರ್ಯ ಪ್ರಕಾಶವನುಳ್ಳ ವಕಾರ ಮಂತ್ರ
ಮೂರ್ತಿಯಾದ ಜಂಗಮಲಿಂಗಕ್ಕೆ ಇತ್ತು ಹಿಂದೆ ಹೇಳಿದ ಮೃದು
ಕಠಿಣ ಉಷ್ಣವೆಂಬ ಪದಾರ್ಥವನು ಆ ಜಂಗಮ ಲಿಂಗಕ್ಕೆ ತ್ವಗೀಂದ್ರಿಯವೇ
ಮುಖವಾದ ಕಾರಣ ಆ ಮುಖದಿಂದವೇ ಸೋಂಕಿದ ಪದಾರ್ಥವನು ಷಡ
ಕ್ಷರ ಮಂತ್ರ ಸ್ಮರಣೆಯಿಂದಲಿ ಓಂ ಹ್ರೈಂ ವಕಾರ ಮಂತ್ರ ಮೂರ್ತಿ

ಜಂಗಮಲಿಂಗವೇ ನಿಮಗರ್ಪಿತವೆಂದು ಸುಮನ ಹಸ್ತದಿಂ ಕೊಟ್ಟು ಆ ಪ್ರಸಾದವ ಕೊಂಬ ಆ ಲಿಂಗ ಧ್ಯಾನದಿಂ ಸ್ಪರ್ಶನಂಗೆಯ್ಯಲದೇ ಆ ಲಿಂಗದ ಪ್ರಸಾದವೆನಿಪುದು. ಅಂತಪ್ಪ ಆ ಚರಲಿಂಗದ ಸ್ಪರ್ಶನ ಪ್ರಸಾದವನು ಸೇವಿಸುವಾತನು ಹಿರಿಯ ಆ ಪ್ರಾಣಲಿಂಗಿಯಾದ ಯಜಮಾನನು ಸದ್ಯೋನ್ಮುಕ್ತನು ಇಹದಲ್ಲಿ ಬಾಳುತ್ತಲೇ ಆ ಜಂಗಮ ಲಿಂಗದ ಸೇವನರತನಾಗಿ ಆ ಪರಶಿವನಲ್ಲಿಯೇ ಸಮರಸವಾಗುವನೆಂಬುದೇ ಪದದ ತಾತ್ಪರ್ಯಾರ್ಥ.

ಸಾಕ್ಷಿ:— ಮನೋಹಸ್ತೇನ ನಾಯ್ವಂಗ:। ಪ್ರಾಣಲಿಂಗಿ ತಥೈವಚ।
ಜಂಗಮೇ ತನ್ಮುಖ ಶ್ಚೈವ। ಅರ್ಪಿತಂ ಸ್ಪರ್ಶಭೋಕ್ತೃವಾನ್

ತಾತ್ಪರ್ಯ:— ಚಿದ್ವಾಯುವೇ ಅಂಗವಾದ ಪ್ರಾಣಲಿಂಗಿಗೆ ಸುಮನವೆಂಬ ಹಸ್ತದಿಂದೆ ಜಂಗಮಲಿಂಗಕ್ಕೆ ತ್ವಗೀಂದ್ರಿಯ ಮುಖದಲ್ಲಿ ಸ್ಪರ್ಶನ ದ್ರವ್ಯವ ಸಮರ್ಪಿಸಿ ಆ ತೃಪ್ತಿಯನೆ ಭೋಗಿಸುವನು ಎಂಬುದೀಗ ಈ ಗ್ರಂಥದರ್ಥ ॥ ೬ ॥

---

ಪದ:— ಗಳದೊಳಾಮಳಕಫಳದಾಕಾರ ಚಕ್ರದೊಳು। ನಳಿನ ಷೋಡಶದಳದಿ ಷೋಡಶ ಸ್ವರಾಕ್ಷರವು। ಎಳೆ ಗಗನ ಶಶಿ ಕಿರಣ ಶರಣಗೆ ಹಸ್ತ ಸುಜ್ಞಾನ ಶ್ರೋತ್ರ ಮುಖದಿಂ ಶಬ್ದವಾ ॥ ಥಳಥಳಿಪ ಶೇಷ ಪ್ರಸಾದ ಲಿಂಗಕೆಯಿತ್ತು। ಅಳವಟ್ಟು ಆ ಪ್ರಸಾದವನೆ ಸ್ವೀಕರಿಸುತಿಹ। ನಳಿನಾರಿ ಚೂಡನೊಳಗಳುವಿಲ್ಲದಿಹುದೆಂದು ಪೊಗಳುತಿಹುದೇ ರಹಸ್ಯವು ॥

ಟೀಕು ॥ ಗಳದೊಳು ಕಂಠಸ್ಥಾನದಲ್ಲಿ ಆಮಳಕ ಫಳಕ ನೆಲ್ಲೀಕಾಯೋಪಾದಿಯಲ್ಲಿ ಬಟುವಾಗಿಯುಳ್ಳಂಥಾ ಆಕಾರ ಆ ವೃತ್ತಾಕಾರದಿಂದೆ ಶೋಭಿಸುವ ಚಕ್ರದೊಳು ಅನಾಹತ ಚಕ್ರದಿಂ ಮೇಲೆ ದಶಾಂಗುಲ ಪ್ರಮಾಣದಲ್ಲಿರ್ಪ ವಿಶುದ್ಧಿ ಚಕ್ರದಲ್ಲಿ ನಳಿನ ಸ್ಫಟಿಕ ವರ್ಣವನುಳ್ಳ ವಾರಿಜಕ್ಕೆ ಆ ಷೋಡಶದಳದಿ ಆ ಕಮಲದ ಹದಿನಾರು ಎಸಳಗಳಲ್ಲಿ ಷೋಡಶ ಸ್ವರಾಕ್ಷರವು ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ ಎಂಬ ೧೬ ಸ್ವರಾಕ್ಷರಗಳು ನ್ಯಾಸವಾಗಿಹವು. ಎಳೆಗಗನ ಕಾರ್ಮೇಘಂಗಳು ಕೆಮ್ಮುಗಿಲು ಮೋಡಮುಸುಂ



ಕಿಲ್ಲದೆ ಶಶಿ ಕಿರಣ ಚಂದ್ರಪ್ರಭಾಮಯ ಸ್ವರೂಪವಾದ ಶರಣಗೆ ಚಿದಾಕಾಶವೇ ಅಂಗವಾದ ಶರಣಗೆ ಹಸ್ತ ಸುಜ್ಞಾನ ಅಜ್ಞಾನವಳಿದು ಸುಜ್ಞಾನವೇ ಹಸ್ತವಾಗಿಹುದು. ಶ್ರೋತ್ರ ಮುಖದಿಂ ಜ್ಞಾನೇಂದ್ರಿಯೊಳಗಣ ಶ್ರೋತ್ರೇಂದ್ರಿಯ ವಕ್ತ್ರದಿಂದೆ ಶಬ್ದವ ತಾಳ ಕಂಸಾಳ ಭೇರಿ ಮೃದಂಗ ವೀಣೆ ತಂಬೂರಿ ಶಂಖನಾದ ಸ್ವರ ರಾಗ ಪದ ವಚನ ಮುಂತಾದ ನಾನಾಶಬ್ದಗಳು ಥಳಥಳಿಪ ಐದುಕೋಟಿ ಬಾಲಸೂರ್ಯಪ್ರಕಾಶವನುಳ್ಳಂಥಾ ಶೇಷ ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗದಿಂದೆ ಮೇಲೆ ಉಳುಮೆಯಾದಂಥ ಪ್ರಸಾದ ಲಿಂಗಕ್ಕೆ ಶರಣನ ಶೇಷವು ಲಿಂಗಕ್ಕೆ ಲಿಂಗದ ಶೇಷವು ಶರಣಂಗಾದ ಕಾರಣ ಅಂತಪ್ಪ ಪ್ರಸಾದ ಲಿಂಗಕ್ಕೆ ಇತ್ತು ಆ ಕಂಠಸ್ಥಾನದ ವಿಶುದ್ಧಿಚಕ್ರದಲ್ಲಿ ಸ್ಫಟಿಕವರ್ಣದ ೧೬ ದಳ ಕಮಲದ ಕರ್ನಿಕಾಕುಹರದಲ್ಲಿ ವೃತ್ತಾಕಾರ ಗರ್ಭಗೃಹದಲ್ಲಿರುವಂಥಾ ಯಕಾರ ಮಂತ್ರ ಮೂರ್ತಿ ಪ್ರಸಾದಲಿಂಗಕ್ಕೆ ಶ್ರೋತ್ರೇಂದ್ರಿಯ ಮುಖದಿಂದೆ ಪೂರ್ವೋಕ್ತ ಶಬ್ದ ಪದಾರ್ಥವನು ಷಡಕ್ಷರ ಮಂತ್ರ ಸ್ಮರಣೆಯಿಂದೆ ಓಂ ಹೆಸ್ರ್ಯ ಯಕಾರ ಮಂತ್ರ ಮೂರ್ತಿ ಪ್ರಸಾದ ಲಿಂಗವೇ ನಿಮಗರ್ಪಿತವೆಂದು ಸುಜ್ಞಾನ ಹಸ್ತದಿಂ ಆ ಲಿಂಗಕ್ಕೆ ಕೊಟ್ಟು ಅಳವಟ್ಟು ಇಂತಪ್ಪ ಲಿಂಗ ಧ್ಯಾನವೇ ಸಾಧ್ಯವಾಗಿ ಆ ಪ್ರಸಾದವನೆ ಆ ಶಬ್ದ ಪದಾರ್ಥವನು ಆ ಪ್ರಸಾದಲಿಂಗದ ಧ್ಯಾನದಿಂದೆ ಆ ಶರಣನು ಕೇಳಲಾಗಿ ಆ ಶಬ್ದ ಪದಾರ್ಥವೆಲ್ಲವು ಆ ಲಿಂಗದ ಪ್ರಸಾದವೆ ಆಯಿತ್ತಾಗಿ ಅಂತಪ್ಪ ಪ್ರಸಾದವ ಸ್ವೀಕರಿಸುತ್ತಿಹ ಆ ಶಬ್ದ ಪದಾರ್ಥವನು ಆರೋಗಿಸುವಂಥ ಶಿವಶರಣನು ನಳಿನಾರಿ ವಾರಿಜಕ್ಕೆ ವೈರಿಯಾದಂಥ ಚಂದ್ರ ಚೂಡನೊಳು ಮಸ್ತಕದಲ್ಲಿ ಧರಿಸಿದಂಥ ಪರಶಿವನಲ್ಲಿ ಅಳುಪಿಲ್ಲದಿಹುದೆಂದು ಕೇಡಿಲ್ಲದಿರ್ಪುದೆಂದು ಪೊಗಳುತಿಹದ ರಹಸ್ಯಂ ಇಂತೆಂದು ವೇದಾಗಮಂಗಳಲ್ಲಿ ರಹಸ್ಯವಾಗಿ ಹೇಳುತ್ತಿಹುದೆಂಬರ್ಥ

ಸಾಕ್ಷಿ:— ಜ್ಞಾನಹಸ್ತೇನ ಶರಣೋ। ವ್ಯೋಮಾಂಗಸ್ಯ ಪ್ರಸಾದತೆ।
ಶ್ರೋತ್ರೇಣ ಚತುನ್ಮುಖಂಶ್ಚೈವ। ಅರ್ಪಿತಂ ಶಬ್ದ ಭೋಕ್ತೃವಾನ್

ತಾತ್ಪರ್ಯ:— ಚಿದಾಕಾಶವೇ ಯಂಗವಾದ ಶರಣನು ಸುಜ್ಞಾನವೆಂಬ ಹಸ್ತದಿಂದೆ ಪ್ರಸಾದ ಲಿಂಗಕ್ಕೆ ಶ್ರೋತ್ರ ಮುಖದಲ್ಲಿ ಶಬ್ದ ಪದಾರ್ಥವನರ್ಪಿಸಿ ಆ ತೃಪ್ತಿಯನೇ ಭೋಗಿಸುವನೆಂಬರ್ಥ ॥ ೭ ॥

---

**ಪದಃ—** ಕಿಕ್ಕಿರಿದ ತಮಂಧದಾಜ್ಞಾ ಚಕ್ರವು ಫಣಿಯ। ಇಕ್ಕೆಲದ ಮಧ್ಯದೊಳಗಿರ್ಪ ದ್ವಿದಳ ಪದ್ಮ। ದಕ್ಕರವು ಹಂ ಕ್ಷ ಮಾಣಿಕ್ಯ ವರ್ಣ ಪೀಠದೊಳು ಸಿಕ್ಕಿರುವ ಮಹಲಿಂಗಕೆ। ಮಕ್ಕಳುಂಡರೆ ಮಾತೆ ಸಂತೋಷಿಸುವ ತೆರದಿ। ಇಕ್ಕುತಿಹ ಭಾವ ಹಸ್ತದಿ ಹೃದಯ ಮುಖದಿಂದೆ। ಮಿಕ್ಕ ಪ್ರಸಾದವನು ಕೊಂಡು ಸುಖಿಸುವ ಐಕ್ಯಯಕ್ಕಡಿಗ ಪರಲೋಕದಿ॥

**ಟೀಕುಃ —** ಕಿಕ್ಕಿರಿದ ಕಿಷ್ಕಿಂಧವಾದಂಥ ತಮಂಧದ ಮಂಗಾರ ಬಹುಳ ಅಮಾವಾಸ್ಯೆಯ ಕಾರ್ಮುಗಿಲಿನಲ್ಲಿ ಪಟ್ಟಿಸಿದ ಕತ್ತಲೆಯೋಪಾದಿಯ ಭ್ರೂಮಧ್ಯಸ್ಥಾನದಲ್ಲಿರ್ಪ ಆಜ್ಞಾಚಕ್ರವು ಫಣಿಯ ಲಲಾಟದ ಇಕ್ಕೆಲ ಮಧ್ಯದೊಳಗೆ ಎರಡು ಹುಬ್ಬಿನ ನಡುವೆ ಇರ್ಪ ಇಂತಹಂಥ ದ್ವಿದಳ ಪದ್ಮ ಆ ಆಜ್ಞಾಚಕ್ರದಲ್ಲಿರುವ ಉಭಯ ಪತ್ರದ ಕಮಲವು ಅಕ್ಕರವು ಹಂ ಕ್ಷಂ ಆ ಉಭಯದಳಂಗಳಲ್ಲಿರುವ ಎರಡಕ್ಷರವು ಮಾಣಿಕ್ಯ ವರ್ಣ ಜ್ಯೋತಿರ್ಮಯ ತೇಜದಿಂದೊಪ್ಪುವ ಪೀಠದೊಳು ಆ ಭ್ರೂಮಧ್ಯ ಸ್ಥಾನದಾಜ್ಞಾಚಕ್ರದಲ್ಲಿರುವಂಥ ಮಾಣಿಕ್ಯವರ್ಣವನುಳ್ಳ ದ್ವಿದಳ ಕಮಲದ ಸಿಂಹಾಸನದಲ್ಲಿ ಸಿಕ್ಕಿರುವ ಕೀಲಿಸಿಕೊಂಡಿರುತಿರ್ಪ ಮಹ ಹಿಂದೆ ಹೇಳಲ್ಪಟ್ಟ ಪಂಚಲಿಂಗಂಗಳಿಗೆಯು ದೊಡ್ಡಿತ್ತಾದಂಥ ಲಿಂಗಕ್ಕೆ ತಮಂಧಾಕಾರದ ಗರ್ಭಗೃಹದೊಳಗಿರುವ ಅನಂತ ಕೋಟಿ ಬಾಲಸೂರ್ಯ ಪ್ರಕಾಶವನುಳ್ಳ ಓಂಕಾರ ಮಂತ್ರ ಮೂರ್ತಿಯಾದ ಮಹಾ ಲಿಂಗಕ್ಕೆ ಮಕ್ಕಳುಂಡರೆ ಶಿಶುಗಳಾರೋಗಿಸಿದೊಡೆ ಮಾತೆ ಸಂತೋಷಿಸುವ ತೆರದಿ ತಾಯಿಯು ತೃಪ್ತಿಯಾಗುವಂತೆ ಇಕ್ಕುತಿಹ ಭಾವ ಹಸ್ತದಿ ದಾರ್ಥವನಿದು ಸದ್ಭಾವ ಹಸ್ತದಿಂ ಕೊಡುವ ಹೃದಯ ಮುಖದಿಂದೆ ಜ್ಞಾನೇಂದ್ರಿಯಂಗಳೇ ಕುಕ್ಷಿಯಾಗುಳ್ಳ ಹೃದಯವೇ ಮಹಾಲಿಂಗ ಮುಖವಾದ ಕಾರಣ ಆ ಹೃದಯ ಮುಖದಿಂದ ಆ ಪಂಚಲಿಂಗಗಳಿಗೆಯೂ ಮಾತೃಸ್ಥಾನವಾದ ಮಹಾಲಿಂಗಕ್ಕೆ ಶಬ್ದ ಸ್ಪರ್ಶ ರೂಪು ರಸ ಗಂಧಂಗಳನು ಆಚಾರಾದಿ ಪ್ರಸಾದಾಂತ್ಯವಾದ ಪಂಚಲಿಂಗಗಳನು ಕೊಂಡಂಥಾ ಪಂಚವಿಷಯ ಪದಾರ್ಥಂಗಳ ಪರಿಣಾಮ ತೃಪ್ತಿಯನೇ ಆ ಮಹಾ ಲಿಂಗಕ್ಕೆ ಷಡಕ್ಷರ ಮಹಮಂತ್ರ ಸ್ಮರಣೆಯಿಂದಲೇ ಓಂ ಹ್ರಃ ಓಂಕಾರ ಮಂತ್ರಮೂರ್ತಿ ಮಹಲಿಂಗವೇ ನಿಮಗರ್ಪಿತವೆಂದು ಸದ್ಭಾವ ಹಸ್ತದಿಂದ ಆ ಪರಿಣಾಮ ಪದಾ



ರ್ಥವನು ಸಮರ್ಪಿಸಿ ಮಿಕ್ಕ ಪ್ರಸಾದವನು ಆ ಐಕ್ಯನು ಆ ಮಹಾಲಿಂಗ ಧ್ಯಾನದಿಂದೆ ತೃಪ್ತಿಯಾದುದೆಲ್ಲವು ಆ ಮಹಾಲಿಂಗದ ಹೆಚ್ಚುಗೆಯನುಳ್ಳ ಪರಿಣಾಮ ಪ್ರಸಾದವೆನಿಸುವದು. ಅಂತಪ್ಪ ಪರಿಣಾಮ ಪ್ರಸಾದವನು ಕೊಂಡು ಸುಖಿಸುವ ಐಕ್ಯ ಅಂತಪ್ಪ ಪ್ರಸಾದವನಾರೋಗಿಸುವಂಥಾ ಚಿದಾತ್ಮನೇ ಯಂಗವಾದ ಐಕ್ಯನು ಯಕ್ಕಡಿಗ ಪರಲೋಕದಿ ಇಂತಪ್ಪ ಮಹತ್ಮನು ಇಹಲೋಕವ ಮೀರಿ ಪರಲೋಕದ ಪರಮ ಪದವ ಪರಬ್ರಹ್ಮನೊಡನೆ ಏಕಾರ್ಥವಾಗುವನೆಂಬರ್ಥ ॥

**ಸಾಕ್ಷಿಃ—** ಶ್ಲೋಃ- ಆತ್ಮಾಂಗೋ ಭಾವ ಹಸ್ತೇನ। ಐಕ್ಯಶ್ಚಾಪಿ ಮಹತ್ಮನೇ॥ ಹೃನ್ಮುಖೇ ತತ್ಪರಿಣಾಮ ಪದಾರ್ಥಂ ತೃಪ್ತಿ ಭೋಕ್ತೃವಾನ್॥

**ತಾತ್ಪರ್ಯಃ—** ಚಿದಾತ್ಮನೇ ಅಂಗವಾದ ಐಕ್ಯನು ಸದ್ಭಾವ ಹಸ್ತದಿಂದೆ ಮಹಲಿಂಗಕ್ಕೆ ಹೃದಯೇಂದ್ರಿಯ ಮುಖದಲ್ಲಿ ಪರಿಣಾಮವನೆ ಪದಾರ್ಥವನರ್ಪಿಸಿ ಆ ತೃಪ್ತಿಯನೆ ಭೋಗಿಸುವನೆಂಬರ್ಥ ॥ ೮ ॥

---

**ಪದಃ—** ಷಡುಪೀಠದೊಳಗೆಸೆವ ಜಡಜದೈವತ್ತೆಸಳು। ಒಡನಿರುವ ಪ್ರಣಮಲೋಮವಿಲೋಮದಿ ಜಪಿಸಿ। ಕಡೆಗೆ ಮಾಯಾಖ್ಯ ಪಂಚಾಕ್ಷರಿಯನುಚ್ಚರಿಸಿ ಹರನಕ್ಷಿಜಪವೆನಿಸುದು॥ ಬಿಡದೆ ಪೀಠಾದಿ ಷಡ್ಕಮಲ ಕರ್ಣಿಕೆಯೊಳಗಿಹ। ಮೃಡನ ಚಿತ್ತೆನಿಸುವ ನಕಾರಾದಿ ಓಂಕಾರ। ದೊಡೆಯ ಷಣ್ಮೂರ್ತಿಯಂತರ್ಥಾವದಿಂದೆಜಿಸಿ ಒಡೆವೆರೆದ ಮಹಲಿಂಗದಿ॥

**ಟೀಕುಃ—** ಷಡುಪೀಠದೊಳಗೆ ಆಧಾರಾದ್ಯಾಜ್ಞಾಂತ ಮಾದಾರು ಸಿಂಹಾಸನಂಗಳೊಳಗೆ ಎಸೆವ ಒಪ್ಪುವಂಥ ಜಡಜದ ಕಮಲದ ಐವತ್ತೆಸಳುಗಳೊಳಗೆ ಪಂಚದಶದಳಂಗಳಲ್ಲಿ ಅಡಗಿರುವ ಆ ಐವತ್ತುದಳಂಗಳಲ್ಲಿರುವ ಪ್ರಣವು ಚತುರಕ್ಷರಾದಿಯಾಗಿ ದ್ವಿಯಕ್ಷರವಂತ್ಯವಾದ ಐವತ್ತಕ್ಷರಂಗಳನುಲೋಮ। ವಿಲೋಮದಿ ದ್ವಿಯಕ್ಷರವಾದಿಯಾಗಿ ಚತುರಕ್ಷರವಂತ್ಯವಾಗಿ ಅಧೋಮುಖವಾಗಿ ಜಪಿಸುವದೇ ಲೋಮವೆನಿಸುವದು. ಚತುರಕ್ಷರವಾದಿಯಾಗಿದ್ವಿಯಕ್ಷರಾಂತ್ಯವಾಗಿ ಊರ್ಧ್ವಮುಖವಾಗಿ ಜಪಿಸುವದೇ ವಿಲೋಮವೆನಿಸುವದು. ಜಪಿಸಿ ಲೋಮದಿಂದೈವತ್ತು ವಿಲೋಮದಿಂದೈವತ್ತು ಉಭಯಂ ಕೂಡಲಾಗಿ ನೂರಾಯಿತ್ತು. ಈ ಲೋಮ

ವಿಲೋಮದಿಂದಾದ ೧೦೦ ಪ್ರಣಮಗಳನು ಮಾನಸ ಸ್ಮರಣೆಯಿಂದ ಜಪಂಗೈಯ್ದು ಕಡೆಗೆ ಆ ನೂರು ಪ್ರಣಮಂಗಳನು ಜಪಿಸಿದ ನಂತರ ಮಾಯಾಖ್ಯ ಪಂಚಾಕ್ಷರಿಯನುಚ್ಚರಿಸಿ ಓಂ ಹ್ರಾಂ ಹ್ರೀಂ ನಮಃಶಿವಾಯ ಯೆಂಬ ಅಷ್ಟಾಕ್ಷರಿಯ ಮಂತ್ರವ ಸ್ಮರಿಸಲಾಗಿ ಉಭಯಂ ಕೂಡಿ ೧೦೮ ಆಯಿತ್ತು ಹರನಕ್ಷಿಜಪವೆನಿಪುದು. ತ್ರಿಪುರ ಸಂಹಾರ ಮಾಡಿದ ಪರಮೇಶ್ವರನ ತ್ರಿನಯನವಲ್ಲುದಿಸಿದ ಕ್ರಿಯಾರುದ್ರಾಕ್ಷಿಯು ಧಾರಣ ಜಪಂಮಾಡೆ ಪಾಪಕ್ಷಯವಹುದು. ಇಂತಪ್ಪ ಅಕ್ಷರ ಮಾಲಿಕಾ ಇಂತಪ್ಪ ಜ್ಞಾನ ರುದ್ರಾಕ್ಷಿಯನಂತರಂಗದಲ್ಲಿ ಜಪಿಸಲು ಮೋಕ್ಷವಾಗುವದು. ಇದು ಚಿದ್ರುದ್ರಾಕ್ಷಿಯ ಜಪವೆನಿಸುವದು. ಬಿಡದೆ ಇಂತಪ್ಪ ಪ್ರಾಣಲಿಂಗ ಚರ್ನೆಯನು ಮಾಡಿ ಜ್ಞಾನ ರುದ್ರಾಕ್ಷಿಯ ಜಪವನಂತರಂಗದಲ್ಲೆಡೆವಿಡದೆ ಪೀತ ದಿ ಪೀತ ವರ್ಣವೇ ಆದಿಯಾಗಿ ಮಾಣಿಕ್ಯ ವರ್ಣವೇ ಅಂತ್ಯಮಾದಾರು ವರ್ಣದ ಷಟ್ ಕಮಲ ಆ ಆರು ವರ್ಣದ ತಾವರೆಯ ಕರ್ಣಿಕೆಯೊಳಿಹ ಕಿಂಜಲ್ಕದ ಒಳಗಿರುವ ಚತುಃಕೋಣೆ ಧನುರ್ಗತಿ ತ್ರಿಕೋಣೆ ಷಟ್ಕೋಣೆ ವೃತ್ತಾಕಾರ ತಮಂಧಾಕಾರವೆಂಬ ಗರ್ಭ ಗೃಹಂಗಳಲ್ಲಿರುವ ಮೃಡನ ಪರಶಿವನ ಚಿತ್ತೆನಿಸುವ ಆ ಪರಶಿವನ ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನ್ಯ ಗೌಪ್ಯವೆಂಬಾರು ಮುಖಂಗಳಿಗೆ ಆರು ಬೀಜವೆನಿಸುವ ನಕಾರಾದಿ ಓಂಕಾರ ನಕಾರಾದಿಯಾಗಿ ಓಂಕಾರಾಂತ್ಯವಾದ ಓಂ ನಮಃ ಶಿವಾಯ ಎಂಬ ಅಕ್ಷರಂಗಳಿಗೆ ಒಡೆಯ ಮೂಲಮೂರ್ತಿಯಾದಂಥ ಷಣ್ಮೂರ್ತಿ ಷಡ್ವಿಧ ಬ್ರಹ್ಮವನೊಳಕೊಂಡ ಪರಬ್ರಹ್ಮವನು ಅಂತರ್ಭಾವದಿಂದೆ ಜಪಿಸೆ ಅಂತಪ್ಪ ಪರಬ್ರಹ್ಮನ ಷಣ್ಮುಖಂಗಳನು ಶರಣನು ತನ್ನಂತರಂಗದಲ್ಲಿ ಷಡಾಧಾರ ಚಕ್ರಂಗಳಲ್ಲಿ ನಕಾರಾದಿ ಓಂಕಾರಾಂತ್ಯವಾದ ಷಡ, ಪ್ರಣವ ಮೂರ್ತಿಗಳಾದ ಆಚಾರಾದಿ ಮಹಾಲಿಂಗಾಂತ್ಯವಾದ ಷಡ್ವಿಧ ಲಿಂಗಂಗಳನು ಸುಚಿತ್ತಾದಿ ಸದ್ಭಾವಾಂತ್ಯವಾದ ಷಡ್ವಿಧ ಹಸ್ತದಿಂ ಷಡ್ವಿಧ ಕಮಲಂಗಳಿಂದೆ ಮಾನಸದಿಂ ಪೂಜಿಸಲು ಒಡೆವೆರೆವ ಕ್ಷೀರದಲ್ಲಿ ಕ್ಷೀರ ಬೆರೆದಂತೆ ಕೂಡುವನು ಮಹಲಿಂಗದಿ ಆ ಪರಬ್ರಹ್ಮದಲ್ಲಿಯೇ ಸಾಮರಸ್ಯವಹನೆಂಬರ್ಥ

ಸಾಕ್ಷಿ:— ಶ್ಲೋ॥ ಪಂಚೇಂದ್ರಿಯ ಮುಖಂ ಜ್ಞಾತ್ವಾ। ಪದಾರ್ಥಂಚ ಸಮರ್ಪಿತಂ।ತಲ್ಲಿಂಗ ಮನುತೇಯಸ್ತು।ತಸ್ಮಿನ್ ಲಿಂಗ ಪ್ರತೀಯತೆ



ತಾತ್ಪರ್ಯ: ಪಂಚೇಂದ್ರಿಯಂಗಳ ಮುಖವನರಿತು ಆವುದಾನೊಂದು ಲಿಂಗವು ಪದಾರ್ಥವಾಗಿ ಇಂದ್ರಿಯಂಗಳ ಸಮರ್ಪಿಸಿಕೊಂಡಿತು. ಆ ಲಿಂಗದಲ್ಲಿಯೇ ಜೀವನು ಬೆರಸುವನೆಂದು ಈಶ್ವರನು ಪಾರ್ವತಾದೇವಿಯರಿಗೆ ನಿರೂಪವಂ ಕೊಟ್ಟರೆಂಬರ್ಥ. ॥ ೯ ॥

ಇಲ್ಲಿ ಪರಿಯಂತರ ಸೂರ್ಯ ಮಂಡಲವೆನಿಸುವದು. ಇನು. ಮುಂದೆ ಚಂದ್ರಮಂಡಲವು.

---

ಪದಃ – ಹತ್ತು ಶತ ಶತದಳದೊಳಿರ್ಪ ತ್ರೈದ್ವಿದಳದೊ।ಳೊರ್ತಿಸುತಲಿರ್ಪ ಪ್ರಸಾದ ಪ್ರಣವಾದ ನಡುವೆ। ಮತ್ತೆ ಶತಕೋಟಿ ಸೋಮಪ್ರಕಾಶದೊಳೆಸೆವ ನಿತ್ಯ ನಿಃಕಲ ವಸ್ತುವಾ॥ ಅತ್ಯಂತ ಉನ್ಮನಿಯ ಚಕ್ರದೊಳು ಬೆಳಗುತಿಹ। ವಸ್ತು ನವರತ್ನ ಚಿತ್ ಸೂರ್ಯ ಚಂದ್ರರ ಪ್ರಭೆಯೆ। ಚಿತ್ತ ಸಂಚಲಿಸದೆ ನಿರೀಕ್ಷಿಸುತಲಿರುವಾತ ಸತ್ಯ ಬ್ರಹ್ಮದೊಳೈಕ್ಯನು ॥

ಟೀಕು ॥ ಹತ್ತು ಶತ ಹತ್ತನೂರು ಕೂಡಲು ಒಂದು ಸಾವಿರವಾಯಿತು. ಶತ ಒಂದು ನೂರು ದಳದೊಳು ಇಂತು ಒಂದು ಸಾವಿರ ವಂದುನೂರು ದಳಗಳುಳ್ಳ ಮರೀಚಿಕಾ ವರ್ಣದ ಕಮಲಂಗಳೊಳಗೆ ಇರ್ಪ ಆ ಸಾವಿರದಾ ನೂರೆಸಳುಗಳ ಮಧ್ಯದಲ್ಲಿರುವಂಥ ತ್ರಿಮೂರು ದ್ವಿಎರಡು ದಳದೊಳು ಆ ಮೂರು ಎರಡು ಕೂಡಿ ಐದಾದ ಐದು ದಳಂಗಳೊಳಗೆ ವರ್ತಿಸುತಲಿರ್ಪ ವರ್ತಿಸುತಲಿರುವಂಥ ಪ್ರಸಾದ ಪ್ರಣಮದ ನಡುವೆ ಓಂ ಹ್ರಾಂ ಹ್ರೀಂ ಹ್ರೂಂ ಹ್ರೈಂ ಯೆಂಬುವ ಪ್ರಸಾದ ಪ್ರಣವಂಗಳೈದರ ಮಧ್ಯದಲ್ಲಿರುವಂಥ ಮತ್ತೆ ಆ ಮರೀಚಿಕಾ ವರ್ಣವ ಮೀರಿ ಶತಕೋಟಿ ಸೋಮಪ್ರಕಾಶದೊಳೆಸೆವ ಒಂದು ಅರ್ಬುದ ಚಂದ್ರ ಪ್ರಕಾಶದಿಂದೊಪ್ಪುವ ನಿತ್ಯ ಕೇಡಿಲ್ಲದ ನಿಃಕಲ ವಸ್ತುವ ಷಟ್ಕಲಾತೀತ ನಿಃಕಲಯೆನಿಸುವ ನಿಃಕಲ ಬ್ರಹ್ಮವನ್ನು ಅತ್ಯಂತ ಹಿಂದೆ ಹೇಳಿದಾಧಾರಾದಿ ಷಡು ಚಕ್ರಂಗಳಿಂ ಮಿಗಿಲಾದ ಉನ್ಮನಿಯ ಬ್ರಹ್ಮ ರಂಧ್ರದಲ್ಲಿಯ ಚಕ್ರದೊಳು ನೆತ್ತಿ ಸ್ಥಾನದಲ್ಲಿರುವಂಥ ಬ್ರಹ್ಮ ಚಕ್ರದಲ್ಲಿ ಬೆಳಗುತಿಹ ಪ್ರಕಾಶಿಸುತ್ತಿರುವಂಥ ವಸ್ತು ಆ ಕಮಲ ಕರ್ಣಿಕಾ ಮಧ್ಯದಲ್ಲಿರುವ

ಶೂನ್ಯಾಕಾರದ ಗರ್ಭ ಗೃಹದೊಳಗಣ ಓಂಕಾರ ಮಂತ್ರಮೂರ್ತಿ ನಿಃಕಲ ಬ್ರಹ್ಮವು ನವರತ್ನ ಮೌಕ್ತಿಕಾದಿ ಸವರ್ಣಂಗಳ ಚಿತ್ ಸೂರ್ಯನ ಜ್ಞಾನ ಭಾಸ್ಕರನ ಚಂದ್ರರ ಪ್ರಭೆಯ ಜ್ಞಾನ ಚಂದ್ರರ ದಿವ್ಯ ಕಾಂತಿಯನು ಚಿತ್ತ ಸಂಚಲಿಸದೆ ಮನಸ್ಸು ಎಡಬಲಕ್ಕೆ ಹರಿಯಲೀಸದೆ ಆ ಸಾವಿರದ ನೂರು ದಳಂಗಳಲ್ಲಿಯ ಸಾವಿರದ ನೂರು ಪ್ರಣವಂಗಳಿಂದೆ ಷಡಕ್ಷರ ಮಂತ್ರಸ್ಮರಣೆಯುಕ್ತವಾಗಿ ಪಂಚ ಪ್ರಸಾದ ಪ್ರಣವಂಗಳ ಧ್ಯಾನದಿಂದೆ ಮಂಡಲ ತ್ರಯದ ಅಕಾರ ಉಕಾರ ಮಕಾರವೆಂಬ ಪ್ರಣವ ತ್ರಯಂಗಳ ಸ್ಮರಿಸುತ ಓಂಕಾರ ಮಂತ್ರಮೂರ್ತಿ ನಿಃಕಲ ಲಿಂಗವನು ಮಾನಸದಿಂ ಪೂಜಿಸಿ ಆ ಮಹಾ ಬೆಳಗಿನ ಪದಾರ್ಥವನರ್ಪಿಸಿ ಅಂತಪ್ಪ ನಿಃಕಲ ಲಿಂಗದ ಬೆಳಗಿನ ಪ್ರಸಾದವನು ನಿರೀಕ್ಷಿಸುತಲಿರುವಾತ ಆ ನಿಃಕಲ ಲಿಂಗದ ಧ್ಯಾನದಿಂದಲೇ ಆ ಚಿತ್ ಬೆಳಗ ನೋಡಲಾಗಿ ಅದು ಆ ಲಿಂಗವ ಬೆಳಗಿನ ಪ್ರಕಾಶವೆನಿಸುವದು ಅಂತಪ್ಪ ಪ್ರಸಾದಮಯವಾದ ಆ ಮಹಾ ಬೆಳಗಿನ ಪ್ರಕಾಶವನ್ನು ಜ್ಞಾನ ಚಕ್ಷುವಿನಿಂದ ನೋಡುವ ಶರಣನು ಸತ್ಯ ಯಥಾರ್ಥವಾದ ಬ್ರಹ್ಮಸೊಕೈಕ್ಯವು. ಆ ನಿಃಕಲ ಲಿಂಗದಲ್ಲಿಯೇ ಏಕಾರ್ಥವಹನೆಂಬರ್ಥ ॥

**ಸಾಕ್ಷಿ:**— ಶ್ಲೋ ॥ ಯಥಾ ಪ್ರಕ್ಷೆ ತಥಾ ಕಾಷ್ಠೆ । ಯಥಾ ಕ್ಷೀರ ತಥಾ ಘೃತಂ । ಯಥಾ ತಿಲೇ ತಥಾ ತೈಲಂ । ಸರ್ವತ್ರ ವಸ್ಥಿತಂ ಕಲಃ ॥ ೧ ॥

**ತಾತ್ಪರ್ಯ:**— ಬ್ರಹ್ಮರಂಧ್ರದಲ್ಲಿರುವ ಚಿತ್ಕಲೆಯು ಹ್ಯಾಂಗಿಹುದೆಂದಡೆ ಕಾಷ್ಟದಲ್ಲಿ ಅಗ್ನಿ ಹಾಲಿನಲ್ಲಿ ತುಪ್ಪ ಎಳ್ಳಿನಲ್ಲಿ ಎಣ್ಣೆ ಹೇಗೆ ಹುದುಗಿರ್ಪುದೋ ಹಾಗೆ ಆಧಾರಾದಿ ಆಜ್ಞಾಂತವಾದ ಎಲ್ಲಾ ಠಾವಿನಲ್ಲಿಯೂ ಇಂತಪ್ಪ ಕಳೆಯು ಇರುತ್ತಿಹುದೆಂಬ ತಾತ್ಪರ್ಯ ॥ ೧೦ ॥

---

**ಪದ** ॥ ಆರು ನೆಲೆಮಂಟಪದ ನೀರೇಜನಂಗಳೊಳ । ಗೇರಿರುವ ಪನ್ನದ್ವಿವಿಂಶತಿ ಪುನಃ ಪುನದಿ । ಸೇರಿಸಲು, ನವ ಉಭಯ, ಶತಶತವು ಸಾವಿರವಿ ತೋರುತಿಹ ದಳಕಮಲದೀ ॥ ಆ ರವ್ಯದಿಂದಲ್ಲಿ ಮರೀಚಿ ವರ್ಣದೊಳಿರ್ಪ । ವಾರಿ ಪತ್ರದೊಳು ವಿಸ್ತರಿಸಿರ್ಪ ವ್ಯಂಜನದಿ। ಮಾರಹರ ಶರಣರಿದನಾರೈದು ನೋಡುವುದು ಘೋರ ಭವಿಗಳಿಗಸದಳಾ ॥



**ಟೀಕು** ॥ ಆರು ನೆಲೆ ಆಧಾರಾದಿ ಆಜ್ಞಾಂತವಾದ ಷಡುಚಕ್ರಂಗಳು ಒಂದರಮೇಲೊಂದಂತರಗಳಾಗಿಹ ಕಾರಣ ಆರು ನೆಲೆ ಎನಿಸುವವು. ಮಂಟಪ ಆ ಷಡುಚಕ್ರಂಗಳಲ್ಲಿರುವ ಷಟ್ ಕಮಲಂಗಳ ಕರ್ಣಿಕಾ ಮಧ್ಯದ ಚತುಃಕೋಣೆ, ಧನುರ್ಗತಿ ತ್ರಿಕೋಣೆ, ಷಟ್ಕೋಣೆ, ವೃತ್ತಾಕಾರ ತಮಂಧಾಕಾರವೆಂಬ ಗರ್ಭ ಗೃಹಂಗಳೇ ಮಂಟಪವೆನಿಸುವವು. ನೀರಜ ಈ ಷಡುಚಕ್ರಂಗಳಲ್ಲಿರುವ ಷಡುಕಮಲಂಗಳ ಎಸಳಂಗಳೊಳು ಆ ಷಡುಕಮಲಂಗಳ ಐವತ್ತು ದಳಂಗಳೊಳಗೆ ಏರಿರುವ ಆ ದಳಂಗಳ ಮೇಲಾರೂಢವಾಗಿರುವ ಪನ್ನ ಐವತ್ತು ಅಕ್ಷರಂಗಳನು ದ್ವಿವಿಂಶತಿ ಇಪ್ಪತ್ತೆರಡುಬಾರಿ ಪುನಃ ಪುನದಿ ಆ ಐವತ್ತಕ್ಷರಂಗಳನು ಇಪ್ಪತ್ತೆರಡಾವರ್ತಿ ಮರಳಿ ಮರಳಿ ಸೇರಿಸಲು ಗಣಿತವ ಮಾಡಲು ನವ ಉಭಯ ಶತ ಒಂಬತ್ತು ಎರಡು ಕೂಡಿ ಹನ್ನೊಂದು ನೂರಾಯಿತ್ತು. ಶತವು ಸಾಸಿರದಿ ಆ ಸಾವಿರದ ನೂರು ದಳಂಗಳಲ್ಲಿ ಸಾವಿರದ ನೂರು ಅಕ್ಷರಂಗಳು ತೋರುತ್ತಿಹ ಆ ಶರಣನ ಜ್ಞಾನ ದೃಕ್ಕಿಗೆ ಕಾಣಬರುವ ದಳಕಮಲದಿ ಆ ಬ್ರಹ್ಮರಂಧ್ರದಲ್ಲಿರ್ಪ ಕಮಲದ ಸಾಸಿರದ ನೂರು ದಳಗಳಲ್ಲಿ ಆರವ್ಯದಿಂದಲಿ ಇಲ್ಲಿ ಒಪ್ಪಲ್ಪಟ್ಟ ಮರೀಚಿ ವರ್ಣದೊಳಿಪ್ಪ ಒಂದು ಅಬ್ಬುದ ಸೂರ್ಯ ಪ್ರಕಾಶವನುಳ್ಳ ಕಮಲದಲಿ ಇರ್ಪ ಇರುತಿರುವ ವಾರಿ ಪತ್ರದೊಳು ಆ ಹನ್ನೊಂದು ನೂರು ದಳಂಗಳುಳ್ಳ ಬ್ರಹ್ಮ ಕಮಲದಲ್ಲಿ ವಿಸ್ತರಿಸಿರ್ಪ ಆ ಸಾವಿರದ ನೂರು ದಳಗಳೊಳಗೆ ಮೂಲಸ್ತಂಭ ಸ್ವರೂಪವಾಗಿ ಮೂರ್ತಿ ಮಾಡಿಕೊಂಡಿರ್ಪ ವ್ಯಂಜನದಿ ತಲೆ ಕಟ್ಟಿಲ್ಲದ ವ್ಯಂಜನಾಕ್ಷರಂಗಳಾದಂಥ ಅಕಾರ ಶೂನ್ಯವಾಗಿ ಕಕಾರಾದಿ ಕ್ಷಕಾರಾಂತ್ಯ ಅಕಾರಾದಿ ಅಃಕಾರಾಂತ್ಯವಾದೈವತ್ತಕ್ಷರಂಗಳ ಆ ಸಾವಿರದ ನೂರ ದಳಂಗಳಲ್ಲಿ ವ್ಯಂಜನಾಕ್ಷರದಿಂದೆ ಅನುಲೋಮ ವಿಲೋಮದಲ್ಲಿರುತಿರ್ಪವು. ಮಾರಹರನ ಶರಣರು ಮನ್ಮಥನ ಸಂಹಾರಮಾಡಿದಂಥ ಪರಶಿವನ ಶರಣರು ಅಂತಪ್ಪ ಪರಶಿವನ ಅಂತರ ಬಾಹ್ಯಂಗಳಲ್ಲಿ ಕ್ರಿಯಾ ಜ್ಞಾನಂಗಳಿಂದೆ ಪೂಜಿಸುವ ಶರಣರು ಇಂತಪ್ಪ ಪ್ರಾಣಲಿಂಗದ ಲಕ್ಷಣವನು ತಿಳಿದು ಬ್ರಹ್ಮರಂಧ್ರದಲ್ಲಿರುವ ಸಹಸ್ರದ ನೂರು ದಳದ ಮರ್ಮವನು ಆರೈದು ನೋಡುವದು. ಆ ಕಮಲ ಕರ್ಣಿಕಾ ಮಧ್ಯದಲ್ಲಿರುವ ಕರ್ಣಿಕೆಯಲ್ಲಿ ಬಕಾರ ಪ್ರಣವ. ಅಲ್ಲಿ ನಿಃಕಲ ಲಿಂಗವು. ಆ ಲಿಂಗದ ತ್ರಿವಿಧ ದಿಕ್ಕಿನಲ್ಲಿ ಸೂರ್ಯ ಚಂದ್ರಾಗ್ನಿಯೆಂಬ ಮಂಡಲತ್ರಯ, ಆ ಮಂಡಲತ್ರಯದ

ಮಧ್ಯದಲ್ಲಿ ಅಕಾರ ಉಕಾರ ಮಕಾರವೆಂಬ ಪ್ರಣವತ್ರಯ, ಆ ಕರ್ಣಿಕೆಯ ಬಳಸಿನಲ್ಲಿ ವೃತ್ತಾಕಾರ, ಆ ವೃತ್ತಾಕಾರದ ಬಳಸಿನಲ್ಲಿ ಐದು ದಳ, ಆ ಪಂಚ ದಳಂಗಳಲ್ಲಿ ಓಂ ಹ್ರಾಂ ಹ್ರೀಂ ಹ್ರೂಂ ಹ್ರೈಂ ಎಂಬ ಐದು ಪ್ರಸಾದ ಪ್ರಣವಂಗಳು ಮತ್ತಾ ದಳಂಗಳ ಹೊರವಳಯದಲ್ಲಿ ವೃತ್ತಾಕಾರ ಅದರ ಬಳಸಿನಲ್ಲಿ ೧೦೦ ದಳಂಗಳು ಆ ೧೦೦ರೊಳಗೆ ಷಡಾಧಾರ ಚಕ್ರಂಗಳಲ್ಲಿ ನ್ಯಾಸವಾಗಿರುವ ೫೦ ಅಕ್ಷರಂಗಳನು ಪೂರ್ವೋಕ್ತ ಲೋಮ ವಿಲೋಮದಿಂ ಲಿಖಿಸಲಾಗಿ ಉಭಯಂ ಗೂಡಿ ೧೦೦ ಪ್ರಣವಂಗಳಾದವು. ಆ ೧೦೦ ಪ್ರಣವಂಗಳನು ಆ ೧೦೦ ದಳಂಗಳಲ್ಲಿ ಲಿಖಿಸಿ ಇದೇ ಪರಿಯಾದಿಯಲ್ಲಿ ೧೧ ವೃತ್ತಾಕಾರಂಗಳ ಲಿಖಿಸಿ ಆ ಹನ್ನೊಂದು ವೃತ್ತಾಕಾರಂಗಳ ಬಳಸಿನಲ್ಲಿ ಹನ್ನೊಂದುನೂರು ದಳಂಗಳನು ಲಿಖಿಸಲಾಗಿ ಸಾವಿರದ ನೂರು ದಳಂಗಳಾದವು. ಆ ದಳಂಗಳಲ್ಲಿ ಐವತ್ತು ಅಕ್ಷರಂಗಳನು ಲೋಮ ವಿಲೋಮದಿಂದೆ ಲಿಖಿಸಲು ಸಾವಿರ ನೂರು ಪ್ರಣವಂಗಳಾದವು ಈ ಸಾವಿರದ ನೂರು ಪ್ರಣವಂಗಳೇ ಆ ನಿಃಕಲ ಲಿಂಗದ ೧೧ ನೂರು ಬಳಸಿನಲ್ಲಿ ಸಾವಿರದ ನೂರು ಮಂತ್ರ ಲಿಂಗಂಗಳೆಂದು ಹನ್ನೆರಡನೆಯ ಬಳಸಿನಲ್ಲಿರುವ ಐದು ಪ್ರಸಾದ ಪ್ರಣವ ಮಂತ್ರ ಲಿಂಗಂಗಳೆಂದು ಅವರೊಳಗೆ ಮಂಡಲತ್ರಯದಲ್ಲಿ ಆ ಉ ಮಾಕ್ಷರಂಗಳ. ಅಂತು ಸಾವಿರದ ನೂರು ಒಂಬತ್ತು ಪ್ರಣವಂಗಳನನುಭಾವ ಮುಖದಿಂ ಕಾಂಬುವಂಥಾದ್ದು ಹರ ಶರಣರಿಗಲ್ಲದೆ ಘೋರ ಭವಿಗಳಿಗಸದಳ ಇಂತಪ್ಪ ಪ್ರಾಣಲಿಂಗದ ಮರ್ಮವನರಿಯದೆ ಭವ ಭಾರದಲ್ಲಿ ತೊಳಲುವ ಭವಿಗಳಿಗೆ ಅರಿಯಲಾರದಾಗಿಹುದು ಎಂಬರ್ಥ

ಸಾಕ್ಷಿ :— ಶ್ಲೋ॥ ಷಡಕ್ಷರಾಂತ ಮಂತ್ರಸ್ಯ । ಷಡಾಧಾರಸ್ಯ ಬೀಜಕಂ। ಯಥಾಬೀಜಾಕ್ಷರಂ ಜ್ಞಾನಂ।ದುರ್ಲಭಂ ಶೃಣು ಪಾರ್ವತಿ

ತಾತ್ಪರ್ಯ :— ಈ ಷಡಕ್ಷರಂಗಳ ತರುವಾಯದಿಂದವೆ ಮಂತ್ರವು ಷಡಾಧಾರಂಗಳಲ್ಲಿ ಬೀಜಾಕ್ಷರಂಗಳಾಗಿರ್ಪವು. ಈ ಬೀಜಾಕ್ಷರಂಗಳನರಿವುದು ದುರ್ಲಭವೆಂದು ಪಾರ್ವತಾ ದೇವಿಯವರಿಗೆ ಪರಮೇಶ್ವರನು ಹೇಳಿದ ವಾಕ್ಯ ॥ ೧೧ ॥

---



ಪದ :— ಶಿರದೊಳು ಶಿಖಾಚಕ್ರ ಪರಮತ್ರೈದಳ ಪದ್ಮ । ಪರಿಪೂರ್ಣ ಮಕ ಶೂನ್ಯಾಕಾರದಿಂದೊಪ್ಪುತಿಹ । ಹರೆಯು ದ್ವಿಶತಕೋಟಿ ಪ್ರಭೆಯಿಂದ ಬಿಂಬಿಸುವ ಚಿರನಾಮ ಶೂನ್ಯಲಿಂಗ ॥ ಪರಿಪರಿಯ ನಾಮ ಸೀಮೆಯನಳಿದು ಲಿಂಗದೊಳು । ಕರಿಗೊಂಡು ಪರಮ ಕಾಷ್ಠಿತವಾಗಿಯಾ ಶರಣ । ಅರಳೆಯನಲ ಯೋಗದಿರವಿನಿಂದಲಿ ತಾನು ಬೆರದಿರುವ ಶೂನ್ಯದಲ್ಲಿ ॥

ಟೀಕು :— ಮಸ್ತಕಸ್ಥಾನದಲ್ಲಿರುವದೀಗ ಶಿಖಾಚಕ್ರವು. ಆ ಚಕ್ರವು ಉತ್ಕೃಷ್ಟವಾದ ಆಧಾರಾದಿ ಬ್ರಹ್ಮರಂಧ್ರಾಂತ್ಯವಾದ ಏಳು ಚಕ್ರಂಗಳಿಗೆಯು ಉತ್ಕೃಷ್ಟವಾದಂಥ ತ್ರೈದಳಪದ್ಮ ಆಕವಲವು ಮೂರುದಳಂಗಳುಳ್ಳಂಥ ಪದ್ಮ ಪಚ್ಚ ವರ್ಣದ ಕಮಲವು ಪರಿಪೂರ್ಣ ಆ ಕಮಲದ ಮೂರು ಪತ್ರಂಗಳಲ್ಲಿ ಅ ಉ ಮ ಎಂಬ ಮೂರಕ್ಷರಂಗಳು ಮಧ್ಯ ಕರ್ಣಿಕೆಯಲ್ಲಿ ಕ್ಷಕಾರ ಪ್ರಣವದಿಂ ಪೂರ್ಣೀಕರಿಸುವಂಥ ಮಹಾ ಘನತರವಾದಂಥ ಶೂನ್ಯಾಕಾರದಿಂದೆ ಆ ಕರ್ಣಿಕೆಯ ಮಧ್ಯದಲ್ಲಿ ಶೂನ್ಯಾಕಾರವೆಂಬ ಗರ್ಭಗೃಹದಲ್ಲಿ ಶೋಭಿಸುವ ಹರೆಯು ಚಂದ್ರರು ದ್ವಿಶತ ಕೋಟಿ ಎರಡಬರ್ಣದ ಪ್ರಭೆಯಿಂದ ಪ್ರಕಾಶದಿಂದ ಬಿಂಬಿಸುವ ಪ್ರಜ್ವಲಿಸುವ ಚಿರ ಕೇಡಿಲ್ಲದ ನಾಮ ಪೆಸರುಳ್ಳಂಥಾ ಶೂನ್ಯಲಿಂಗ, ಎರಡಬರ್ಣದ ಚಂದ್ರ ಪ್ರಕಾಶವನುಳ್ಳ ಕ್ಷಕಾರ ಮಂತ್ರ ಮೂರ್ತಿಯಾದ ಶೂನ್ಯ ಬ್ರಹ್ಮದಲ್ಲಿ ಪರಿಪರಿಯ ಹಲವು ಬಗೆಯ ನಾಮ, ಎಂದರೆ ನಾನು ಸನ್ಯಾಸಿ ನಾನು ದಿಗಂಬರ ನಾನು ಜಟಾಧಾರಿ ನಾನು ಶೀಲವಂತ ನಾನು ವ್ರತಸ್ಥ ನಾನು ನೇಮವಂತ ನಾನು ವಿರಕ್ತನೆನಿಸಿಕೊಂಬ ನಾಮದ ಹೆಚ್ಚುಗೆಯನು ಸೀಮೆ ಕಂಠ ಪಾವುಡ, ಧೂಳ ಪಾವುಡ ಮುಖ ಪಾವುಡ ಸರ್ವಾಂಗ ಪಾವುಡ ಚಿಲಮಿಯ ಗುಗ್ಗಳಿ, ಪರಪಾಕ ವರ್ಜಿತ, ಪಂಙ್ತಿ ಭೇದ, ಪಾಕ ಭೇದ, ಇವರು ವಿರಕ್ತರು, ಇವರು ಸಂಸಾರಿಗಳು ಎಂಬ ಪ್ರಪಂಚಿನ ಲೌಕಿಕ ವರ್ತನೆಯನು ಇಂತಪ್ಪ ನಾಮ ಸೀಮೆಗಳನ್ನು ಅಳಿದು ಇವೆಲ್ಲವು ಪಾರಮಾರ್ಥಕ್ಕೆ ಸಲ್ಲವೆಂದತಿಗಳೆದು ಲಿಂಗದೊಳು ಆ ಶೂನ್ಯ ಬ್ರಹ್ಮದಲ್ಲಿಯೇ ಕರಿಗೊಂಡು ಕ್ರಿಯಾಮಂತ್ರ ಧ್ಯಾನಂಗಳಿಂದ ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗದಲ್ಲಿ ಶರಣನ ಮನವು ಚನ್ನಾಗಿ ಏಕೀಕರಿಸಿಕೊಂಡು ಪರಮ ಉತ್ಕೃಷ್ಟವಾದ ಕಾಷ್ಠಿತವಾಗಿ ಜಪತಪ ನಿತ್ಯ ನಿಯಮ ಸ್ಥಾವರ ಅನ್ಯದೈವ ಪುತ್ರ ಮಿತ್ರ ಕಳತ್ರರೆಂಬ ಲೌಕಿಕ ವರ್ತನೆಯನು

ಮರೆದು ಲಿಂಗಭಾವದಲ್ಲಿಯೇ ಪರವಶನಾಗಿ ಅಂಗ ಭ್ರಾಂತನಾದಂಥ ಆ ಶರಣ ಆ ಶೂನ್ಯಲಿಂಗವನು ಮಾನಸದಲ್ಲಿ ಪೂಜಿಸುವಾತನು ಅರಳೆ ಕಾರ್ಪಾಸವು ಅನಲ ಅಗ್ನಿಯು ಯೋಗದಿರವಿನಿಂದಲಿ ಆ ಅರಳೆ ಬೆಂಕಿ ಎರಡು ಕೂಡಿ ಉರಿದಲ್ಲಿ ಅರಳೆ ಸುಟ್ಟು ಹೇಗೆ ಭಸ್ಮನಾಗುವದೋ ಅರಳೆ ಭಸ್ಮನಾದನಂತರ ಅಗ್ನಿ ಹೇಗೆ ನಂದಿ ಶಾಂತವಾಗುವದೋ ಹಾಗೆ ತಾನು ಬೆರದಿರುವ ಶೂನ್ಯದಲ್ಲಿ ತಾನೆನಿಸುವ ಶರಣನೇ ಅರಳೆಯಾಗಿ ಲಿಂಗವೆನಿಸುವ ಬ್ರಹ್ಮನೇ ಬೆಂಕಿಯಾಗಿ ಶರಣನ ಲಿಂಗವೊಳಕೊಂಡು ಏಕವಾದ ರೆಂಬರ್ಥ ॥

**ಸಾಕ್ಷಿ** :— ಶ್ಲೋ:- ಜಲತ್ಕಾಲಾನಲಘಾಶ। ತಟಿತ್ಕೋಟಿ ಸಮ ಪ್ರಭಾ ॥ ತಸ್ಯೋರ್ಧ್ವಂಚ ಶಿಖಾಸೂಕ್ಷ್ಮ ಚಿದ್ರೂಪ ಪರಮಾಂ ಕಲಾ

**ತಾತ್ಪರ್ಯ** :— ಹೊಳೆಯುತ್ತಿಹ ಕಾಲಾಗ್ನಿಯೋಪಾದಿ ಕಾಂತಿಯನುಳ್ಳಂಥಾ ಕೋಟಿ ಮಿಂಚುಗಳಿಗೆ ಸಮಾನವಾದ ಪ್ರಭೆಯುನುಳ್ಳಂಥ ಜ್ಞಾನ ಸ್ವರೂಪವಾದಂಥ ಸೂಕ್ಷ್ಮವಾದಂಥ। ಕಳೆಯು ಶಿಖಾಗ್ರದಲ್ಲಿಹುದೆಂಬ ತಾತ್ಪರ್ಯ ॥ ೧೨ ॥

---

**ಪದ** :— ಸಿರಿಯುಳ್ಳಹರದ ಮರ್ತ್ಯದ ವ್ಯವಹಾರವನೆಲ್ಲ। ಬರಿಮಾಡಿ ಕೊಂಡಷ್ಟು ಲಿಂಗವನು ಒಟ್ಟೈಸಿ। ದೊರೆ ನಿರಂಜನ ಲಿಂಗ ವರವಜ್ರದಳದಲ್ಲಿರುವ ಪಶ್ಚಿಮ ಚಕ್ರದೀ ॥ ಶರಿರ ವಿಡಿದಿಹ ಶರಣಶಿರದ ಹಿಂಭಾಗದೊಳು। ಪರಿಪೂರ್ಣಬೆಳಗದಿಟ್ಟಿಸಲು ಆ ಲಿಂಗದೊಳು। ಉರಿ ಕರ್ಪುರವುಕೂಡಿ ಧಗಧಗಿಸ ಪರಿಯಲ್ಲಿ ನೆರೆವನು ನಿರಂಜನದಲ್ಲಿ ॥

**ಟೀಕು** :— ಸಿರಿಯುಳ್ಳ ಹರದ ಐಶ್ವರ್ಯಯುಕ್ತವಾದ ವಾಣಿಜನು ಮರ್ತ್ಯದ ವ್ಯವಹಾರವನೆಲ್ಲವ ಬರಿಮಾಡಿಕೊಂಡು ತುಂಬಿಕೊಂಡು ವ್ಯವಹರಿಸುತಿರುವ ಪ್ರಕಾರವಾಗಿ ಪಾರಮಾರ್ಥ ಮುಖದಿಂ ವ್ಯವಹರಿ



ಸುವ ಶರಣನು ಅಷ್ಟಲಿಂಗವನು ಆಚಾರಾದಿ ಶೂನ್ಯಾಂತವಾದ ಎಂಟು ಲಿಂಗಗಳನು ಅಷ್ಟಚಕ್ರಗಳೆಂಬ ಅಷ್ಟದಿಕ್ಕಿನ ಅಷ್ಟಪಟ್ಟಣಕ್ಕೆ ಅಷ್ಟಲಿಂಗಗಳನೆ ಅಧಿಪತಿಗಳಂ ಮಾಡಿ ಅಲ್ಲಲ್ಲಿಯ ಅಂಗ ಲಿಂಗ ಹಸ್ತಮುಖ ಶಕ್ತಿ ಭಕ್ತಿ ಪ್ರಸಾದ ಪದಾರ್ಥಗಳನು ವ್ಯವಹರಿಸಿಕೊಂಡು ಒಟ್ಟೈಸಿ ಒಂದೊಂದೆ ಲಿಂಗದಲ್ಲಿ ಒಂದೊಂದು ಅಡಗಿ ಏಕವ ಮಾಡಿವರೆ ಆ ಅಷ್ಟಲಿಂಗಂಗಳಿಗು ಗರ್ಭವಾಸವಾದ ನಿರಂಜನ ಲಿಂಗ ಮಾಯಾರಂಜನೆ ರಹಿತವಾದ ನಿರಂಜನ ಬ್ರಹ್ಮವು ವರಶ್ರೇಷ್ಠವಾದ ವಜ್ರ ವಜ್ರಪ್ರಕಾಶವನುಳ್ಳ ದಳದಲ್ಲಿ ಪಳಕಿನ ಪ್ರಕಾಶವನುಳ್ಳ ಏಕದಳದಲ್ಲಿ ದಪಣಾಕಾರದ ಬಿಂದು ಪ್ರಣವದಿಂದೆ ಇರುವ ವಜ್ರಕಾಂತಿಯನುಳ್ಳ ಏಕದಳದ ಕಮಲಕರ್ಣಿಕೆಯಲ್ಲಿ ನಿಃಶೂನ್ಯಾಕಾರವೆಂಬ ಗರ್ಭಗೃಹದಲ್ಲಿ ಅನಂತ ಅರ್ಬುದ ಚಂದ್ರ ಪ್ರಕಾಶವನುಳ್ಳ ವ್ಯಂಜನ ಹಕಾರ ಮಂತ್ರ ಮೂರ್ತಿ ನಿರಂಜನ ಲಿಂಗವಾಗಿ ಮೂರ್ತವಮಾಡಿಕೊಂಡು ಇರುವಂಥ ಪಶ್ಚಿಮ ಚಕ್ರದಲ್ಲಿ ಆ ಎಂಟು ಚಕ್ರಂಗಳಿಗೆಯೂ ಉತ್ತರವಾದ ಪಶ್ಚಿಮ ಚಕ್ರದಲ್ಲಿ ಆ ನಿರಂಜನ ಲಿಂಗವಿರ್ಪುದೆಂಬರ್ಥ ॥

ಶರೀರ ವಿಡಿದಿಹ ಶರಣ ಶರೀರವನು ತಾಳಿರುವಂಥ ಶರಣ ಇಷ್ಟ ಪ್ರಾಣ ಭಾವ ಲಿಂಗಂಗಳನಾರಾಧಿಸುವ ಶರಣನು ಶಿರದ ಹಿಂಭಾಗದೊಳು ಶರಣನ ಮಸ್ತಕದ ಹಿಂದಿಕ್ಕಿನಲ್ಲಿರುವ ಪಶ್ಚಿಮ ಚಕ್ರದಲ್ಲಿ ಪರಿಪೂರ್ಣ ಕೊರತೆಯಿಲ್ಲದ ಅಷ್ಟಲಿಂಗಗಳನು ತನ್ನೊಳಗೆ ತಾನೇ ತುಂಬಿಕೊಂಡು ಇರುವ ಬೆಳಗ ಅನಂತ ಕೋಟಿ ಬಾಲಸೂರ್ಯ ಪ್ರಕಾಶ ಅನಂತ ಅರ್ಬುದ ಚಂದ್ರಪ್ರಕಾಶ ಇಂತಪ್ಪ ಚಿತ್ಪ್ರಕಾಶದ ಬೆಳಗನು ದಿಟ್ಟಿಸಲು, ಆ ವಜ್ರ ವರ್ಣದ ಏಕದಳ ಕಮಲವನು ಆ ನಿರಂಜನ ಲಿಂಗಕ್ಕೆ ಮೂಲ ಮಂತ್ರಯುಕ್ತನಾಗಿ ವ್ಯಂಜನ ಹಕಾರ ಮಂತ್ರ ಮೂರ್ತಿ ನಿರಂಜನ ಲಿಂಗವೇ ನಿಮಗಪಿತವೆಂದರ್ಪಿಸಿ ಆ ಮಹಾಬೆಳಗಿನ ನಿರೀಕ್ಷಣೆಯಲ್ಲಿ ಸ್ಥಿರತರಚಿತ್ತನಾಗಿ ಅರ್ಪಿಸಲು ಆ ನಿರೀಕ್ಷಣೆಯೇ ಆ ನಿರಂಜನ ಲಿಂಗಕ್ಕೆ ಪೂಜೆಯೆನಿಸುವದು, ಆ ಲಿಂಗದೊಳು ಆ ನಿರಂಜನ ಬ್ರಹ್ಮದಲ್ಲಿಯೇ ಉರಿ ಅಗ್ನಿಯು ಕರ್ಪುರವು ಕೂಡಿ ಏಕವಾಗಿ ಧಗಧಗಿಸ ಧಗಧಗಳೆ ಉರಿವಂತೆ ಆ ಅಗ್ನಿಯು ಕರ್ಪುರವು ಎರಡುಕೂಡಿ ಉರಿದಲ್ಲಿ ಬೂದಿ ದೋರದೆ ಆ ಅಗ್ನಿಯೆಯಾಗಿ ಬಯಲ ವೇಧಿಸಿ ಬಯಲಾಗುವಂತೆ ನೆರೆವನು ನಿರಂಜ

ನದಲ್ಲಿ ಆ ಶರಣನೇ ಕರ್ಪೂರವಾಗಿ ಆ ಲಿಂಗವೇ ಅಗ್ನಿಯಾಗಿ ಕ್ರಿಯಾ ಜ್ಞಾನಂಗಳಿಂದೆ ಆ ಲಿಂಗವನು ಸೋಂಕಲು ಆ ಶರಣನ ಶರೀರವೆಲ್ಲವು ಲಿಂಗದಲ್ಲಿಯೇ ದಹಿಸಿ ಆ ಶರಣನು ಚಿನ್ಮದ್ರೋಹದಿಂದೆ ಆ ನಿರಂಜನ ಲಿಂಗದಲ್ಲಿಯೇ ವೇಧಿಸಿ ಆ ಲಿಂಗವೆ ಯಾದನೆಂಬುದೀಗ ನೆರೆವನು ನಿರಂಜನದಿ ಎಂಬ ಶಬ್ದಕ್ಕರ್ಥ ॥

**ಸಾಕ್ಷಿ:** — ಶ್ಲೋ ॥ ವಾಚಾತೀತಂ ಮನಾತೀತಂ ಭಾವಾತೀತಂಚ ತತ್ಪದಂ ಜ್ಞಾನಾತೀತಂ ನಿರಂಜನಂ ಕಳಾಯಾಂ ಸೂಕ್ಷ್ಮ ಭಾವಯೇತ್.

**ತಾತ್ಪರ್ಯ:**— ಆ ಪಶ್ಚಿಮ ಚಕ್ರದಲ್ಲಿರುವ ಕಳೆಯು ವಾಕ್ಕಿಂಗಳಿಗೆಯೂ ಮನಕ್ಕೆಯೂ ಭಾವಕ್ಕೆಯೂ ಜ್ಞಾನಕ್ಕೆಯೂ ಮೀರಿ ಉಳುಮೆಯಾಗಿಹುದೆಂಬ ತಾತ್ಪರ್ಯ ॥ ೧೩ ॥

---

**ಪದ** ॥ ನವಚಕ್ರ ಕಮಲವನು ಮೌನದಿಂದೀಕ್ಷಿಸುತೆ । ಹವಣಿಸಲು ಬಾರದಣು ಚಕ್ರದೊಳಗಿರುತಿರ್ಪ । ನವ ರತ್ನ ಸೂತ್ರದಗ್ರದ ಕಲಶ ಮಣಿಯವೋಲ್ ಇರುವ ನಿರವಯ ವಸ್ತುವಾ॥ ಪವನ ಗತಿಯಿಂದೆ ನವಲಿಂಗಾರ್ಚನೆಯ ಮಾಳ್ಪ ಅವನಿಯೊಳಗಿರುವ ಮನುಜರುಗಳಾರಾದೊಡಂ । ತವೆ ಇಷ್ಟಲಿಂಗದೊಳು ಉಭಯವಳಿದು ಧ್ಯಾನಿಸಲು ಎರಕನಿರವಯ ಲಿಂಗದೀ ॥

**ಟೀಕು** ॥ ನವ ಒಂಬತ್ತು ಚಕ್ರ ಆಧಾರಾದಿ ಪಶ್ಚಿಮಾಂತ್ಯಮಾದ ನವ ಚಕ್ರಂಗಳಲ್ಲಿ ಚತುರ್ದಳಾದಿ ಏಕ ದಳಾಂತ್ಯಮಾದ ಒಂಭತ್ತು ಕಮಲಂಗಳನು ಮೌನದಿಂದೀಕ್ಷಿಸುತ ಅಂತರಂಗದಲ್ಲಿ ಮಾನಸದಿಂದೆ ಆ ನವಲಿಂಗಗಳನು ನವ ಕಮಲಂಗಳನು ದಳ ಪ್ರಣಮಂಗಳನು ಬೀಜ ಪ್ರಣವಂಗಳನು ಆ ನವಲಿಂಗವಿಧದ ಪ್ರಕಾಶಂಗಳನು ಆಯಾಯ ಮಂತ್ರಸ್ಮರಣೆಯಿಂದೆ ಆಯಾಯ ಕಮಲಂಗಳಿಂದೆ ಆಯಾಯ ಲಿಂಗಂಗಳನು ಅರ್ಚಿಸುತ್ತ ಜ್ಞಾನ ಚಕ್ಷುವಿನಿಂ ನೋಡುತ್ತ ಹವಣಿಸಲುಬಾರದ ಅತ್ಯತಿಷ್ಠದ್ದಶಾಂಗುಲನೆಂದು ಹೇಳುವ ವಾಕ್ಯದ ಹವಣಿಗೆ ನಿಲುಕ



ದಂಥಾದ್ದಾದ ಅಪ್ರಮಾಣವಾದ ಅಣುಚಕ್ರ ಆ ನವಲಿಂಗಂಗಳ ಅರುಹಿನಿಂ ಮೇಲೆ ದಶಾಂಗುಲ ಪ್ರಮಾಣಿನಲ್ಲಿ ಜ್ಯೋತಿಯ ಪ್ರಭಾಮಂಡಲದಂತೆ ಬಿಂಬಿಸುವ ಗವಾಕ್ಷಿ ದ್ವಾರದಲ್ಲಿ ಸೂಸುವ ಸೂರ್ಯನ ಪ್ರಕಾಶದೊಳಗೆ ಸುಳಿದಾಡವ ಅಣುಗಳೋಪಾದಿಯಲ್ಲಿರುವದೇ ಅಣುಚಕ್ರವು. ಅಂತಪ್ಪ ಅಣುಚಕ್ರದ ಒಳಗಿರುತಿರ್ಪ ಆ ಚಕ್ರ ಮಧ್ಯದಲ್ಲಿರುವಂಥ ಅನಂತ ಕೋಟಿ ಬಾಲ ಸೂರ್ಯ ಪ್ರಕಾಶವನ, ಅನಂತ ಅರ್ಬುದ ಚಂದ್ರಕಾಂತಿಯನು ಕೀಳ್ಪಡಿಸುವ ಮಹಾ ದಿವ್ಯ ಕಾಂತಿಯನುಳ್ಳ ಅವಾಚ್ಯ ಹಕಾರ ಪ್ರಣವ ಮಂತ್ರಮೂರ್ತಿ ನಿರವಯ ಲಿಂಗವಾಗಿರುತಿರ್ಪ. ನವರತ್ನ ಮುತ್ತು ಮಾಣಿಕ ಮುಂತಾದ ನವರತ್ನಂಗಳನು ಸೂತ್ರ ನವರತ್ನಗಳನು ದಾರದಲ್ಲಿ ಸರಗೊಳಿಸಿ ಅಗ್ರದ ಆ ನವರತ್ನ ಮಾಲಿಕದ ತುದಿಯಲ್ಲಿ ಕಳಶಮಣಿಯವೋಲ್ ಶಿಖಾಮಣಿಯ ಸೇರಿಸಿದೋಪಾದಿಯಲ್ಲಿ ಇರುವ ನಿರವಯ ಬ್ರಹ್ಮನ ಆ ನವರತ್ನ ಮಾಲಿಕದ ಶಿಖಾಮಣಿಯೋಪಾದಿಯಲ್ಲಿ ಆ ನವಲಿಂಗಗಳೇ ನವರತ್ನಂಗಳಾಗಿ ಆ ನವಲಿಂಗಗಳ ಧ್ಯಾನಿಸುವ ಶರಣನ ಧ್ಯಾನವೇ ಸೂತ್ರವಾಗಿ ಆ ನವಲಿಂಗಗಳನರ್ಚಿಸುವ ಅರ್ಚನೆಯೇ ಜ್ಞಾನ ಜಪವಾಗಿ ಅಂತಪ್ಪ ನವ ಲಿಂಗಗಳಿಗೆ ಶಿಖಾಮಣಿಯೆನಿಸುವ ನಿರವಯ ವಸ್ತುವನು ಪವನ ಗತಿಯಿಂದೆ ಚಿತ್ಪ್ರಾಣ ವಾಯು ಸ್ವರೂಪಿನಿಂದೆ ನವಲಿಂಗಾರ್ಚನೆಯ ಮಾಳ್ಪ ಇಂತಪ್ಪ ನವ ಬ್ರಹ್ಮ ಜ್ಞಾನದಿಂದೆ ಅರ್ಚನೆಯ ಮಾಡುವಂಥವರುಗಳು ಅವನಿಯೊಳಗಿರುವ ಈ ಭೂಮಿಯ ಮೇಲಿರುವ ಮನುಜರುಗಳಾರಾದೊಡಂ ದ್ವಿಜಾದಿ ಶ್ವಪಚಾಂತ್ಯಮಾದವರೊಳಗಾರಾದೊಡಾಗಲಿ ತವೆ ಚೆನ್ನಾಗಿ ಇಷ್ಟಲಿಂಗದೊಳು ಗೋಳಕ ಗೋಮುಖ ವೃತ್ತಾಕಾರಂಗಳಿಂದೇಕವಾದ ಇಷ್ಟ ಮಹಾಲಿಂಗದಲ್ಲಿ ಉಭಯವಳಿದು ಅಂತರಂಗದಿ ಪ್ರಾಣಲಿಂಗವೇ ದೃಶ್ಯರೂಪವಾಗಿ ಬಾಹ್ಯದಲ್ಲಿ ಷಟ್ಕೃತಿಗಳಿಂ ಕೂಡಿ ಇಷ್ಟಲಿಂಗವೆನಿಸಿ ಆ ಇಷ್ಟಲಿಂಗವೇ ಜ್ಞಾನಸ್ವರೂಪಿನಿಂದಂತರಂಗದಲ್ಲಿ ಆಚಾರಾದಿ ಮಹಾ ಲಿಂಗಾಂತ್ಯವಾದ ಪ್ರಾಣಲಿಂಗವೆನಿಸಿತ್ತು. ಇಂತು ಅಂತರ್ಬಾಹ್ಯದಲ್ಲಿ ಧ್ಯಾನ ಪೂಜಾ ನಿಮಿತ್ಯಮಾಗಿ ಇಷ್ಟ ಪ್ರಾಣವೆನಿಸಿಕೊಂಬುದು ಒಂದೇ ವಸ್ತುವೆಂದರಿದು ಧ್ಯಾನಿಸಲು ಬಹಿರಂಗದಿಷ್ಟಲಿಂಗದ ಪೀಠ ಕಟಿ ವೃತ್ತ ಗೋಮುಖನಾಳ ಗೋಳಕಂಗಳಲ್ಲಿ ಷಡಕ್ಷರ ಸ್ವರೂಪ ಷಡ್ವಿಧ ಲಿಂಗಂಗಳ ಧ್ಯಾನಿಸಿ ಕ್ರಿಯಾ ಪೂಜೆಯ ಮಾಡುವುದ. ಅಂತರಂಗದಲ್ಲಿ ಆಧಾರಾದಿ

ಆಜ್ಞಾಂತ್ಯವಾದ ಷಡುಚಕ್ರಂಗಳಲ್ಲಿ ಷಡಕ್ಷರ ಷಡ್ವಿಧ ಲಿಂಗಂಗಳ
ಧ್ಯಾನಿಸಿ ಜ್ಞಾನಪೂಜೆಯ ಮಾಡುವುದು. ಇಂತು ಅಂತರಂಗ ಬಹಿರಂಗ
ದಲ್ಲಿ ಕ್ರಿಯಾ ಜ್ಞಾನಗಳಿಂ ಧ್ಯಾನಿಸಲು ಎರಕ ನಿರವಯ ಲಿಂಗದಿ
ಇಂತಪ್ಪ ಇಷ್ಟ ಪ್ರಾಣ ಭಾವ ಲಿಂಗಗಳನು ಅಂತರ್ಬಾಹ್ಯದಲ್ಲಿ ಕ್ರಿಯಾ
ಜ್ಞಾನಂಗಳಿಂದರ್ಚಿಸುವ ಶರಣನು ಕರುವಿಟ್ಟ ಪ್ರತಿಮೆಯೊಳಗೆ ಮೇಣ
ದಾಕಾರವೆಲ್ಲವು ಅಳಿದು ಪಂಚಲೋಹ ಸುವರ್ಣ ಪ್ರತಿಮೆಯಾದಂತೆ ಆ
ಶರಣನ ಶರೀರವೆಲ್ಲವು ಜ್ಞಾನಾಗ್ನಿಯಲ್ಲಿ ಕರಗಿ ನಿರಂಜನವೆಯಾವಂತೆ ಆ
ನಿರವಯ ಬ್ರಹ್ಮದಲ್ಲಿಯೇ ಬೆರಸಲಾಗುವನೆಂಬರ್ಥ. ॥ ೧೪ ॥

---

**ಪದ** :— ಓಂಕಾರವೆಂಬ ಮೂಲ ಪ್ರಣವದೊತ್ತಿನಲ್ಲಿ। ಹ್ರಾಂಕಾ
ರವೆಂಬ ಪ್ರಣವದ ಸಮಾಕ್ಷದೊಳಿಸೆವ । ಹ್ರೀಂಕಾರದೊತ್ತಿನಲಿ ನಮಃ
ಶಿವಾಯೆಂಬಷ್ಟು ಮಾಯಾಖ್ಯ ಪಂಚಾಕ್ಷರಿಯಿದು ॥ ಓಂಕಾರ ಸಹಿತ
ಉನ್ಮನಿ ಐದುದಳದೊಳಿಹ । ಹ್ರಾಂಕಾರ ಹ್ರೀಂಕಾರ ವಿಂತು ತ್ರೈಪ್ರಣ
ವಂಗಳು । ಹ್ರೂಂಕಾರ ಹ್ರೈಂಕಾರವೆನಿಪುಭಯ ಸಹ ಪಂಚ ಶೇಷ ಪ್ರಣ
ವಂಗಳೆನಿಪವೂ ॥

**ಟೀಕು** :— ಓಂಕಾರವೆಂಬ, ತಾರಕಾಕೃತಿಯು ದಂಡಕಾಕೃತಿಯು
ಕುಂಡಲಾಕೃತಿಯು ಅರ್ಧ ಚಂದ್ರಾಕೃತಿಯು ದರ್ಪಣಾಕೃತಿಯು ಜ್ಯೋತಿ
ರಾಕೃತಿಗಳೆಂಬ ಷಟ್ಕೃತಿಗಳಿಂ ಸಂಪೂರ್ಣವಾದ ಓಂಕಾರವೆಂದು ಹೇಳಿಸಿ
ಕೊಂಬ ಮೂಲ ಪ್ರಣವದ ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ
ಮೊದಲ ದ ಈರೇಳು ಭುವನ ಹದಿನಾಲ್ಕು ಲೋಕ ನಾಲ್ಕುವೇದ ಇಪ್ಪ
ತ್ತೆಂಟಾಗಮಗಳು ಮುಂತಾದವಕ್ಕೆ ಈ ಓಂಕಾರವೇ ಮಾತೃಸ್ಥಾನವಾದ
ನಿಮಿತ್ಯ ಮೂಲ ಪ್ರಣವವೆನಿಸುವದು. ಅಂತಪ್ಪ ಮೂಲ ಪ್ರಣವವೆ
ನಿಸುವ ಓಂಕಾರದ ಒತ್ತಿನಲ್ಲಿ ಅಂತಪ್ಪ ಓಂಕಾರ ಸಮಕ್ಷದಲ್ಲಿ ಹ್ರಾಂಕಾ
ರವೆಂಬ ಪ್ರಸಾದ ಪ್ರಣವವು ಸಮಕ್ಷದೊಳಿಸೆವ ಈ ಹ್ರಾಂಕಾರ ಪ್ರಣ
ವದ ಸಮೀಪದಲ್ಲಿ ಶೋಭಿಸುವ ಹ್ರೀಂಕಾರ, ಹ್ರೀಂಕಾರವೆಂಬ ಶುದ್ಧ
ಪ್ರಸಾದ ಪ್ರಣವವು ವೃತ್ತಿನಲ್ಲಿ ಹ್ರೀಂಕಾರ ಪ್ರಣವದ ಸಮಕ್ಷದಲ್ಲಿ
ನಮಃ ಶಿವಾಯಯೆಂಬ ಮೂಲ ಪಂಚಾಕ್ಷರಂಗಳೈದು ಅಷ್ಟ ಇಂತು



ಓಂ ಹ್ರಾಂ ಹ್ರೀಂ ನಮಃಶಿವಾಯವೆಂಬೆಂಟು ಪ್ರಣವಂಗಳು ಮಾಯಾಖ್ಯ
ಪಂಚಾಕ್ಷರಿ ಇದು ಈ ಎಂಟು ಪ್ರಣವಂಗಳು ಕೂಡಲಾಗಿ ಮಾಯಾಖ್ಯ
ಪಂಚಾಕ್ಷರಿಯೆಂದು ಹೇಳಲ್ಪಡುವದು. ಇದೀಗ ಮಾಯಾಖ್ಯ ಪಂಚಾ
ಕ್ಷರಿಯ ಮಂತ್ರವು ಓಂಕಾರ ಸಹಿತ ಈ ಓಂಕಾರ ಪ್ರಣವವಾದಿ
ಯಾಗಿ ಉನ್ಮನಿ ಐದು ದಳವೊಳಿಹ ಉನ್ಮನಿಯೆನಿಸುವ ಬ್ರಹ್ಮರಂಧ್ರದ
ಐದು ದಳದೊಳಗಿರುವ ೧೧೦೦ ದಳಗಳ ಮಧ್ಯದಲ್ಲಿರುವ ೫ ದಳಂಗಳ
ಲ್ಲಿರುತಿರ್ಪ ಹ್ರಾಂಕಾರ ಹ್ರೀಂಕಾರವಿಂತು ತ್ರೈಪ್ರಣವಂ ಓಂಕಾರ
ಹ್ರಾಂಕಾರ ಹ್ರೀಂಗಳು ಓಂ ಹ್ರಾಂ ಹ್ರೀಂ ಎಂಬುವ ಮೂರು ಪ್ರಣವ
ಗಳು ಹ್ರೂಂಕಾರ ಹ್ರೈಂಕಾರವೆನಿಪುಭಯ ಹ್ರೂಂಕಾರ ಹ್ರೈಂಕಾರ
ವೆಂಬುಭಯ ಕೂಡಿ ಪಂಚ ಶೇಷ ಪ್ರಣವಗಳೆನಿಪವು. ಓಂ ಹ್ರಾಂ
ಹ್ರೀಂ ಹ್ರೂಂ ಹ್ರೈಂ ಯೆಂಬೈದು ಪ್ರಣವಗಳೇ ಪ್ರಸಾದ ಪ್ರಣವ
ಗಳೆನಿಸುವವೆಂಬರ್ಥ ॥ ೧೫ ॥

---

**ಪದ** :— ನೆತ್ತಿಯೊಳು ರಾಜಿಸುವ ಕರ್ಣಿಕೆಯ ಪೀಠಕ್ಕೆ । ಕರ್ತೃ
ನಿಃಕಲಕೆ ಬಿತ್ತಾವುದೆಂದೊಡೆ ಪೇಳ್ವೆ । ವರ್ತಿಸುವ ಬಿಂದು ರಹಿತೋಂ
ಕಾರ ಪ್ರಣವವೇ ಸಾರ್ಥಕಾರಣವೆನಿಪುದೂ ॥ ಒತ್ತಿನೊಳಗಿರುವ ಪ್ರಶಿ
ಖಿಯ ಶೂನ್ಯಕೆ ಬೀಜ । ಮತ್ತಂ ಳಕಾರಕ್ಕೆ ಅಂತ್ಯವಾದಕ್ಷರವ । ಅರ್ಥ
ವಿಟ್ಟರಿದುದಾಚರಿಸುತಿಹ ಶ್ರುತಿ ಮಹಿಮನಂ ಮರ್ತ್ಯನೆಂದೆನಲಾಗದು ॥

**ಟೀಕು** :— ನೆತ್ತಿಯೊಳು ಬ್ರಹ್ಮರಂಧ್ರಸ್ಥಾನದೊಳಗೆ ರಾಜಿಸುವ
ಅಲ್ಲಿ ಒಪ್ಪಲ್ಪಟ್ಟಂಥ ಕರ್ಣಿಕೆಯ, ಪೀಠಕ್ಕೆ ಆ ಮರೀಚಿಕಾ ವರ್ಣದ ಸಾವಿ
ರದ ನೂರೈದು ದಳಂಗಳಿಂದೊಪ್ಪುವ ಕಮಲದ ಕಿಂಜಲ್ಕದ ಸಿಂಹಾಸ
ನಕ್ಕೆ ಕರ್ತೃ ಒಡೆಯನಾದಂಥ ನಿಃಕಲಕೆ ನಿವೃತ್ತ್ಯಾದಿ ಶಾಂತ್ಯಾತೀತೋತ್ತ
ರಾಂತ್ಯವಾದ ಷಟ್ಕಲಾಶಕ್ತಿ ರಹಿತವಾದ ನಿಃಕಲ ಲಿಂಗಕ್ಕೆ ಬಿತ್ತಾವುದೆಂ
ದೊಡೆ ಪೇಳ್ವೆ. ಆ ನಿಃಕಲಲಿಂಗಕ್ಕೆ ಬೀಜವಾವುದೆಂದರೆ ಹೇಳ್ವೆ. ವರ್ತಿಸುವ
ವೇದಾಗಮವಾಕ್ಯಂಗಳಿಂದೆ ಪ್ರವರ್ತಿಸುವ ಬಿಂದುರಹಿತ ಶಕ್ತಿ ಸ್ವರೂಪಿನ
ಅನುಸ್ವಾರ ದರ್ಪಣಾಕಾರ ಶೂನ್ಯವಾದಂಥ ಓಂಕಾರ ಪ್ರಣವವೇ ಪರಬ್ರಹ್ಮ

ಸ್ವರೂಪವಾದ ಓಂಕಾರ ಪ್ರಣವವೇ ಸ್ವಾರ್ಥ ಕಾರಣವೆನಿಸುದು. ಆ ಓಂಕಾರ ಪ್ರಣವವೇ ಆ ನಿಃಕಲ ಲಿಂಗಕ್ಕೆ ಆ ಮೂಲೋಂಕಾರವೇ ಪರ ಶಿವ ಬೀಜಾಂಕುರವೆನಿಸುದು. ನೆತ್ತಿಯೊಳಗಿರುವ ಆ ಬ್ರಹ್ಮ ಚಕ್ರಕ್ಕೆ ಸಮೀಪದಲ್ಲಿರುವ ಆ ಪ್ರತಿಬಿಂಬ ಬ್ರಹ್ಮಚಕ್ರಕೂಪರಿಯಾದ ಮಸ್ತಕವು ಶಿಖಾಸ್ಥಾನವಲ್ಲಿಯ ಶೂನ್ಯಕ್ಕೆ ಶೂನ್ಯಲಿಂಗಕ್ಕೆ ಬೀಜ ಬಿತ್ತಾವುದೆಂದರೆ ಮತ್ತೆ ಆ ಬಳಿಕ ಳಕಾರಕ್ಕೆ ಳಕಾರವೆಂಬಕ್ಷರಕ್ಕೆ ಅಂತ್ಯವಾದಕ್ಷರವ ಆ ಳಕಾರಕ್ಕೆ ಕಡೆಯಕ್ಷರವೆನಿಸುವ ಕ್ಷಕಾರವೆಂಬ ಪ್ರಣವವನು ಅರ್ಥವಿಟ್ಟರಿದು ಅನುಭಾವ ಮುಖದಿಂದೆ ತಿಳಿದು ಶಿಖಾಚಕ್ರವಲ್ಲಿರುವ ಶೂನ್ಯ ಲಿಂಗಕ್ಕೆ ಕ್ಷಕಾರ ಪ್ರಣವವೇ ಬೀಜ ಪ್ರಣವವೆಂಬುದ ತಿಳಿದು ಆಚರಿಸುತ್ತಿಹ ಮಹಿಮನು ಆ ಶೂನ್ಯಲಿಂಗಕ್ಕೆ ಮನೋಹಸ್ತದಿಂದೆ ಅಂತರಂಗದಲ್ಲಿ ಪಚ್ಚವರ್ಣವ ತ್ರಿದಳಂಗಳೇ ಪುಷ್ಪವಾಗಿ ಮಧ್ಯ ಕರ್ಣಿಕೆಯೇ ಪೀಠವಾಗಿ ಉ ಮಾ ಕ್ಷರಂಗಳೇ ದಳಪ್ರಣವ ಮಂತ್ರಲಿಂಗಗಳಾಗಿ ಷಡಕ್ಷರಿಯ ಮಂತ್ರ ಸ್ಮರಣೆಯಿಂದ ಬೀಜ ಪ್ರಣವ ಕ್ಷಕಾರ ಮಂತ್ರದಿಂದೆ ಆ ಶೂನ್ಯ ಲಿಂಗವನಾರಾಧಿಸುವಂಥ ಶರಣನನ್ನು ಮರ್ತ್ಯನೆಂದೆನಲಾಗದು. ಜನನ ಮರಣಂಗಳ ಪರಿಭಾವಕ್ಕೆ ಬಂದು ಸುಖದುಃಖಗಳ ಅನುಭವಿಸುವಂಥ ಮನುಜರೊಳಗೆ ಈತನೊಬ್ಬನೆಂದೆನಲಾಗದೆಂಬರ್ಥ ॥

ಸಾಕ್ಷಿಃ— ಶ್ಲೋ॥ ಲೋಕಾಚಾರ ನಿಶ್ಯಬ್ದಂಚ ಲೋಕಾ ಲೋಕ ವಿವರ್ಜಿತಂ॥ ಲೋಕಾಚಾರ ಪರಿಚ್ಛೇದಂ ಪ್ರಾಣಲಿಂಗಂತು ಸಂಸ್ಕೃತ:

ತಾತ್ಪರ್ಯಃ— ಪ್ರಾಣಲಿಂಗಿಯು ಲೋಕಾಚಾರದಲ್ಲಿ ಸಂಬಂಧಿಸುವನಲ್ಲ. ಲೋಕಾ ಲೋಕವೆಂದರೆ ಇಹ ಪರ ಲೋಕದಾಚಾರರಹಿತನೆಂಬರ್ಥ ಅಂತಾ ಲೋಕ ಲೌಕಿಕದ ವರ್ತನೆಯನತಿಗಳೆದು ಪ್ರಾಣಲಿಂಗವೇ ಯುಹನೆಂಬ ತಾತ್ಪರ್ಯ.

। ೧೬ ॥

---

ಪದ। ಪರಮ ಪಶ್ಚಿಮ ಲಿಂಗಕಂಕುರುವಾವುದೆನೆ । ವರವ್ಯಂಜನದ ಹಕಾರವೇ ನಿರಂಜನ ಪ್ರಣವ । ತರಣೇಂದನಂತ ಅರ್ಬುದ ಪ್ರಭೆಯ ಕಿರಣವನು ಕೊರಗಿಸುವ ಮಹ ಬೆಳಗಿನ॥ ಚಿರ ನಿರವಯಕೆ ಅವಾಚ್ಯದ ಹಕಾರವೇ ಬೀಜ । ತರುವಾಯ ವಿಡಿದು ಇದನಾರಾಧಿಸವ



ಶರಣ । ಕರಣಾದಿ ಗುಣಲಿಂಗ ಕಿರಣವಾಗಿರುತಿರ್ಪ ಪರಿಪೂರ್ಣ ಶಿವ ಯೋಗಿಯೂ ॥

ಟೀಕು ॥ ಪರಮ ಪೂರ್ವೋಕ್ತ ಅಷ್ಟ ಚಕ್ರಂಗಳಿಗೆಯು ಅತಿ ಉತ್ಕೃಷ್ಟವಾದ ಪಶ್ಚಿಮ ಪುಸ್ತಕದ ಹಿಂಭಾಗದಲ್ಲಿರುವ ಪಶ್ಚಿಮ ಚಕ್ರದಲ್ಲಿರುವಂಥ ಲಿಂಗಕೆ ನಿರಂಜನ ಬ್ರಹ್ಮಗೆ ಅಂಕುರವಾವುದೆನೆ ಆ ನಿರಂಜನ ಲಿಂಗಕ್ಕೆ ಬೀಜಪ್ರಣವವಾವುದೆಂದರೆ ವರ ಶ್ರೇಷ್ಠವಾದ ವ್ಯಂಜನ ಹಕಾರವೇ ನಿರಂಜನ ಪ್ರಣವವೆನಿಸುವದು. ಆ ನಿರಂಜನ ಲಿಂಗಕ್ಕೆ ವ್ಯಂಜನ ಹಕಾರವೇ ಬೀಜ ಪ್ರಣವವೆಂದು ಹೇಳಲ್ಪಡುವದು. ತರುಣೇಂದು ಸೂರ್ಯ ಚಂದ್ರರುಗಳು ಅನಂತ ಲಕ್ಷಿಸಲಶಕ್ಯವಾದ ಅರ್ಬುದ ಪ್ರಭೆಯ ಅನಂತಾರ್ಬುದ ಸೂರ್ಯ ಪ್ರಕಾಶವನು, ಅನಂತಾರ್ಬುದ ಚಂದ್ರ ಪ್ರಭೆಯ ಕಿರಣವನು ಕಾಂತಿಯನ್ನು ಕೊರಗಿಸುವ ಮಹ ಬೆಳಗಿನ ಅನಂತಾರ್ಬುದ ಸೂರ್ಯ ಚಂದ್ರರ ಪ್ರಭೆಯನ್ನು ತಿರಸ್ಕರಿಸತಕ್ಕಂಥ ಒತ್ತರಿಸುವ ಮಹಾ ಬೆಳಗಿನ ಘನ ಪ್ರಕಾಶವನು ಘನತರವಾದ ಚಿತ್ಪ್ರಕಾಶ ಬೆಳಗನುಳ್ಳಂಥ ಚಿರ ಹಿರಿದು ಕಾಲಂಗಳಲ್ಲಿಯು ನಿರವಯಕ್ಕೆ ಶ್ರೋತ್ರತ್ವಕ್ಕು ನೇತ್ರ ಜಿಹ್ವೆ ಘ್ರಾಣಂಗಳೆಂಬ ಅವಯವಗಳು ನಾಸ್ತಿಯಾಗಿ ಅಖಂಡ ಗೋಳಕಾಕಾರ ತೇಜೋಮೂರ್ತಿಯಾದಂಥ ನಿರವಯ ಬ್ರಹ್ಮಕ್ಕೆ ಅವಾಚ್ಯದ ಹಕಾರವೇ ಬೀಜ ತಲೆಕಟ್ಟು ವ್ಯಂಜನ ಶೂನ್ಯವಾದ ಹಕಾರ ಪ್ರಣವವೇ ಬೀಜಾಕ್ಷರವು. ತರುವಾಯವಿಡಿದು ಆಚಾರಾದಿ ನಿರವಯ ಲಿಂಗವಂತ್ಯವಾದ ದಶಲಿಂಗಗಳನು ಗುರೂಪದೇಶದಿಂದ ಷಡ್ವಿಧ ಹಸ್ತಂಗಳಿಂದೆ ಪಿಡಿದು ಇದನಾರಾಧಿಸುವ ಇಷ್ಟ ಪ್ರಾಣ ಭಾವಲಿಂಗಗಳನು ಆರಾಧಿಸುವ ಕ್ರಿಯಾಜ್ಞಾನ ವಾನಸದಿಂ ಪೂಜಿಸುವಂಥ ಶರಣ ಆ ಮಹಾತ್ಮನೇ ಕರಣಾದಿ ಗುಣ ಷಟ್ಕರಣಂಗಳಾದಿಯಾದ ಆರುವತ್ತಾರು ಕೋಟಿ ಕರಣಾದಿ ಗುಣಂಗಳೆಲ್ಲವು ಲಿಂಗ ಕರಣಂಗಳೆಲ್ಲವು ಲಿಂಗ ಕರಣಂಗಳಾಗಿರ್ಪವು. ಆ ಪರಬ್ರಹ್ಮದ ಚಿತ್ಪ್ರಕಾಶವೆಯಾಗಿ ಬೆಳಗುತಿರ್ಪ ಪರಿಪೂರ್ಣ ಸ್ಥೂಲ ಸೂಕ್ಷ್ಮ ಕಾರಣವೆಂಬ ತ್ರಿವಿಧಾಂಗದಲ್ಲಿ ಇಷ್ಟ ಪ್ರಾಣ ಭಾವಲಿಂಗಂಗಳನ್ನು ತುಂಬಿಕೊಂಡಿರುವಂಥ ಶರಣನು ಶಿವಲಿಂಗಯೋಗಿಯು ಆ ಪಶ್ಚಿಮ ಲಿಂಗದಲ್ಲಿಯೇ ಕೂಡಿದನೆಂಬುದೀಗ ತಾತ್ಪರ್ಯವು ॥

---

ಅರಿವೇ ಗುರು
ಕ್ರಮಾಂಕ
ಶಿವಬಸವ ನಗರ
ಬೆಳಗಾವಿ ೧೦

**ಪದ:** – ಅವನಿಯಪ್ಪಗ್ನಿ ಮಾರುತ ವ್ಯೋಮಾತ್ಮರೆಂ । ಬಿವನಳಿದು ಚಿತ್ಪೃಥ್ವಿ ಚಿಜ್ಜಲ ಚಿದಗ್ನಿ ಚಿ । ತ್ಪವನ ಚಿದ್ವ್ಯೋಮಂಚಿದಾತ್ಮರೆಂದೆನಿಸಿ ಚಿಲ್ಲಿಂಗಗಳ ಭಜಿಸುತಿರ್ಪ ॥ ಶಿವಶರಣನಂಗ ಹಸ್ತಲಿಂಗ ಮುಖಭೇದ । ವಿವರಗಳನರಿದು ಷಡುವಿಧ ಪದಾರ್ಥಗಳನಿತ್ತು । ಶಿವ ಪ್ರಸಾದವೇ ತನಗೆ ಒಡಲಾಗಿ ಯಿರುತಿರುವನೇ ನಿರವಯ ಭೇದಕಂ ॥

**ಟೀಕು** ॥ ಅವನಿ ಪೃಥ್ವಿಯು ಅಪ್ಪು ಜಲವು ಅಗ್ನಿ ಬೆಂಕಿಯು ಮಾರುತ ವಾಯುವ್ಯೋಮ ಆಕಾಶ ಆತ್ಮರೆಂಬ ಚೈತನ್ಯವೆಂಬ ಆತ್ಮಗೂಡಿ ಷಡುಭೂತಂಗಳೆಂಬವನ್ನು ಇವನಳಿದು ಈ ಷಡ್ಭೂತಂಗಳ, ವಿಕಾರ ಗುಣಂಗಳಂ ಕೆಡಿಸಿ ಚಿತ್ಪೃಥ್ವಿ ಚಿತ್ಪೃಥ್ವಿಯೇ ಅಂಗವಾದ ಭಕ್ತನು ಚಿಜ್ಜಲ ಚಿದಪ್ಪುವೇ ಅಂಗವಾದ ಭಕ್ತನು ಚಿಜ್ಜಲ ಚಿದಪ್ಪುವೇ ಅಂಗವಾದ ಮಹೇಶನು ಚಿದಗ್ನಿ ಚಿತ್ ಶಿಖಿಯೇ ಅಂಗವಾದ ಪ್ರಸಾದಿಯು ಚಿತ್ಪವನ ಚಿದ್ವಾಯುವೇ ಅಂಗವಾದ ಪ್ರಾಣಲಿಂಗಿಯು ಚಿದ್ವ್ಯೋಮ ಚಿದಾಕಾಶವೇ ಅಂಗವಾದ ಶರಣನು ಚಿದಾತ್ಮ ಚಿದಾತ್ಮನೇ ಅಂಗವಾದ ಐಕ್ಯನು. ಎಂದೆನಿಸಿ ಇಂತಿವರ ಪೂರ್ವಾಶ್ರಯದ ಜಡತ್ವವನಳಿದು ಶಿವಜ್ಞಾನ ಶಿವಮಂತ್ರಗಳಿಂದೆ ಜ್ಞಾನಮೂರ್ತಿಗಳೆಂದೆನಿಸಿ ಚಿಲ್ಲಿಂಗಗಳ ಭಜಿಸುತಿರ್ಪ ಶಿವಶರಣ ಅಂತಪ್ಪ ಷಣ್ಮೂರ್ತಿ ಷಡ್ವಿಧ ಲಿಂಗಗಳನು ಗರ್ಭೀಕರಿಸಿಕೊಂಡಂಥ ಶಿವಯೋಗೀಶ್ವರನ ಅಂಗ ಚಿತ್ಪೃಥ್ವಿಯಾದಿಯಾಗಿ ಚಿದಾತ್ಮನೇ ಅಂತ್ಯವಾದ ಷಡ್ವಿಧಾಂಗ ಹಸ್ತಂ ಸುಚಿತ್ತವಾದಿಯಾಗಿ ಸದ್ಭಾವಾಂತ್ಯವಾದಾರು ಹಸ್ತಗಳು ಲಿಂಗ ಆಚಾರಾದಿ ಮಹಾಲಿಂಗಾಂತ್ಯವಾದಾರು ಲಿಂಗಗಳು ಮುಖ ಘ್ರಾಣಾದಿ ಹೃದಯಾಂತ್ಯವಾದ ಷಡ್ವಿಧ ಮುಖಂಗಳು ಈ ಭೇದ ವಿವರಗಳನರಿದು ಆಯಾಯ ಲಿಂಗಗಳಿಗೆ ಆಯಾಯ ಹಸ್ತ ಮುಖ ಭೇದಂಗಳನು ಗುರುಮುಖದಿಂದೆ ತಿಳಿದು ಷಡ್ವಿಧ ಪದಾಥವನಿತ್ತು ಶಬ್ದ, ಸ್ಪರ್ಶ, ರೂಪು, ರಸ, ಗಂಧ, ತೃಪ್ತಿಗಳೆಂಬ ಷಡ್ವಿಧ ಪದಾರ್ಥಂಗಳನು ಷಡ್ವಿಧ ಭಕ್ತಿಯಿಂದಾಯಾಯ ಲಿಂಗಕರ್ಪಿಸಿ ಶಿವಪ್ರಸಾದವೇ ಆ ಷಡ್ವಿಧ ಲಿಂಗಗಳ ಪ್ರಸಾದವೇ ತನಗೆ ಒಡಲಾಗಿ ಆ ಶರಣಂಗೆ ಆ ಲಿಂಗ ಪ್ರಸಾದವೇ ಅಂಗವಾಗಿ ಇರುತಿರುವದನೆ ಇಂತಪ್ಪ ಜ್ಞಾನ ಲಿಂಗಾರ್ಚನೆಯನು ಮಾಡಿ ಆ ಲಿಂಗ ಪ್ರಸಾದವನೆ ಭೋಗಿಸುತ್ತಿರುವ ಶಿವಶರಣನೇ ನಿರವಯ ಭೇದಕ ಮೇಲಣ ನಿಃಕಲ



ಲಿಂಗ ಶೂನ್ಯ ಲಿಂಗ ನಿರಂಜನ ಲಿಂಗವನು ಸಾಧಿಸಿ ಕೇವಲ ಪ್ರಸಾದ ಸ್ವರೂಪವಾದ ನಿರವಯ ಬ್ರಹ್ಮವನು ಸಾಧಿಸತಕ್ಕಾತನೆಂದು ತಾತ್ಪರ್ಯ.

**ಸಂಕ್ಷೇ:**— ಶ್ಲೋ ॥ ಭಕ್ತ ಜಿಹ್ವಾಗ್ರತೋ ಲಿಂಗಂ । ಲಿಂಗ ಜಿಹ್ವಾಗ್ರತೋರುಚಿ । ರುಚಿ ಜಿಹ್ವಾಗ್ರೇ ಪ್ರಸಾದಂಚ ಪ್ರಸಾದಂ ಪರಮಂ ಪದಂ ॥

**ತಾತ್ಪರ್ಯ** :— ಶರಣನ ಜಿಹ್ವಾಗ್ರದಲ್ಲಿ ಲಿಂಗವಿಹುದು. ಲಿಂಗದ ಜಿಹ್ವಾಗ್ರಹದಲ್ಲಿ ರುಚಿ ಇಹುದು. ಆ ರುಚಿಯ ಜಿಹ್ವೆಯಲ್ಲಿ ಪ್ರಸಾದವಿಹುದು. ಆ ಪ್ರಸಾದತಾನೇ ಪರಮ ಪದವಾದ ಮುಕ್ತಿ ಸ್ಥಾನವೆಂದರ್ಥ ॥ ೧೮ ॥

---

**ಪದ** :— ನವಗುಹ್ಯ ಸ್ಥಾನವೊಳು ನವಚಕ್ರ ನವ ವರ್ಣ ನವ ಪದ್ಮ ಕರ್ಣಿಕೆಯ ನವಗರ್ಭಗೃಹದೊಳಗೆ । ನವ ಬೀಜ ಪ್ರಣಮದಿಂ ನವ ತೇಜದಿಂದಿರ್ಪ ನವಲಿಂಗ ಮೂರ್ತಿಗಳನೂ ॥ ನವವಿಧದಿ ಬಳಸಿಕೊಂಡಿರ್ಪ ಮಂತ್ರಾಕ್ಷರದ । ಅವಯವಾಗಿರುತಿರ್ಪ ಅಧಿದೈವ ಶಕ್ತಿಯಂ । ಸುವಿವೇಕವರಿದು ನವಲಿಂಗಾರ್ಚನೆಯ ಮಾಳ್ಪನವನೆ ಮಂತ್ರಾತ್ಮನಹುದು ॥

**ಟೀಕು** :— ನವಗುಹ್ಯಸ್ಥಾನದೊಳು ಇಂತಪ್ಪ ಲಿಂಗಾರ್ಚನೆಯ ಮಾಡುವ ಭಕ್ತನಂಗವೇ ಮಹಮೇರು ಪರ್ವತವು. ಆ ಪರ್ವತದೊಳಗಿರುವಂಥ ಗುದ ಗುಹ್ಯ ನಾಭಿ ಹೃದಯ ಕಂಠ ಭ್ರೂಮಧ್ಯನೆತ್ತಿ ಶಿಖಿ ಹಿಂಭಾಗವೆನಿಸುವ ಒಂಬತ್ತು ಗವಿಗಳೆನಿಸುವ ಸ್ಥಾನಂಗಳಲ್ಲಿ ನವಚಕ್ರ

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೆ ಬ್ರಹ್ಮರಂಧ್ರ ಶಿಖಿ ಪಶ್ಚಿಮಚಕ್ರವೆಂಬ ಒಂಬತ್ತು ಚಕ್ರಂಗಳಲ್ಲಿ ನವವರ್ಣಪೀತ ಶ್ವೇತಕುಂಕುಮ ಹರಿತ ಸ್ಫಟಿಕ ಮಾಣಿಕ್ಯ ಮರೀಚಿಕ ಪಚ್ಚೆ ವಜ್ರವೆಂಬ ಒಂಬತ್ತು ವರ್ಣಗಳು

ನವ ಪದ್ಮಕರ್ಣಿಕೆಯ ಚತುರ್ದಳ ಷಡ್ದಳ ದಶದಳ ದ್ವಾದಶದಳ ಷೋಡಶದಳ ದ್ವಿದಳ ಸಾವಿರದನೂರೈದು ದಳತ್ರಿದಳ ಏಕದಳವ

ನುಳ್ಳ ಒಂಬತ್ತು ಕಮಲಂಗಳ ಕಿಂಜಳಕಿನ ಸಿಂಹಾಸನದಲ್ಲಿರುವ ನವ ಗರ್ಭ ಗೃಹಂಗಳೊಳಗೆ ಆ ಕಮಲಗಳ ಮಧ್ಯದಲ್ಲಿ ಗರ್ಭಗೃಹವಾಗುಳ್ಳ ಚತುಃಕೋಣೆ ಧನುರ್ಗತಿ, ತ್ರಿಕೋಣೆ, ಷಟ್ಕೋಣೆ, ವೃತ್ತಾಕಾರ,ತ ಮಂಥಾಕಾರ, ಶೂನ್ಯಾಕಾರ, ಮಹಾಶೂನ್ಯಾಕಾರ, ನಿಃಶೂನ್ಯಾಕಾರವೆಂಬ ಒಂಬತ್ತುಲಿಂಗ ನಿವಾಸಸ್ಥಾನಂಗಳಲ್ಲಿ ನವಬೀಜ ಪ್ರಣಮದಿಂ ನಕಾರ ಮಕಾರ ಶಿಕಾರ ವಕಾರ ಯಕಾರ ಓಂಕಾರ ಬಕಾರ ಕ್ಷಕಾರ ವ್ಯಾಜನ ಹಕಾರವೆಂಬ ಒಂಬತ್ತು ಬೀಜಾಕ್ಷರಂಗಳಿಂದೆ ನವತೇಜದಿಂದಿರ್ಪ ನವ ಲಿಂಗ ಮೂರ್ತಿಗಳನು

ಒಂದು ಕೋಟಿ ಬಾಲಸೂರ್ಯ ಪ್ರಕಾಶವನುಳ್ಳ ಆಚಾರಲಿಂಗವು, ಎರಡು ಕೋಟಿ ಬಾಲಸೂರ್ಯ ಪ್ರಕಾಶವನುಳ್ಳ ಗುರುಲಿಂಗವು, ಮೂರು ಕೋಟಿ ಬಾಲಸೂರ್ಯ ಪ್ರಕಾಶವನುಳ್ಳ ಶಿವಲಿಂಗವು, ನಾಲ್ಕು ಕೋಟಿ ಬಾಲಸೂರ್ಯ ಪ್ರಕಾಶವನುಳ್ಳ ಜಂಗಮ ಲಿಂಗವು ಐದುಕೋಟಿ ಬಾಲ ಸೂರ್ಯ ಪ್ರಕಾಶವನುಳ್ಳ ಪ್ರಸಾದಲಿಂಗವು ಅನಂತಕೋಟಿ ಬಾಲ ಸೂರ್ಯ ಪ್ರಕಾಶವನುಳ್ಳ ಮಹಾಲಿಂಗವು ಇಲ್ಲಿ ಪರಿಯಂತರವು ಸೂರ್ಯ ಮಂಡಲವು.

ಇನ್ನು ಮುಂದೆ ಚಂದ್ರ ಮಂಡಲವು ಒಂದು ಅರ್ಬುದ ಚಂದ್ರ ಪ್ರಕಾಶವನುಳ್ಳ ನಿಃಕಲ ಲಿಂಗವು ಎರಡು ಅರ್ಬುದ ಚಂದ್ರ ಪ್ರಕಾಶವನುಳ್ಳ ಶೂನ್ಯಲಿಂಗವು ಅನಂತ ಅರ್ಬುದ ಚಂದ್ರ ಪ್ರಕಾಶವನುಳ್ಳ ನಿರಂಜನ ಲಿಂಗವು ಇಂತಪ್ಪ ಸೂರ್ಯ ಚಂದ್ರ ಪ್ರಕಾಶವನುಳ್ಳ ಒಂಬತ್ತು ಲಿಂಗಮೂರ್ತಿಗಳನು ನವವಿಧದಿ ಒಂಬತ್ತು ಪ್ರಕಾರದಿಂದಲಿ ಬಳಸಿ ಕೊಂಡಿರ್ಪ ಆ ಲಿಂಗಗಳನು ಪ್ರದಕ್ಷಿಣವಾಗಿರುತ್ತಿರುವಾಗ ಮಂತ್ರಾಕ್ಷರದ ಆ ದಳಂಗಳೊಳಗೆ ಇರುವ ಪ್ರಣಮ ಮಂತ್ರಲಿಂಗಗಳ ಅವಯವವಾಗಿರುತಿರ್ಪ ಆ ದಳ ಪ್ರಣಮಂಗಳಿಗೆ ಕರ ಚರಣಾದ್ಯವಯವಂಗಳಾಗಿರುತಿರ್ಪ ಅಧಿ ದೈವ ಶಕ್ತಿಯರು.

ಆಧಾರ ಚಕ್ರದಲ್ಲಿರುವ ಪೀತ ವರ್ಣದ ಕಮಲದ ನಾಲ್ಕು ದಳಗಳಲ್ಲಿ ಇರುವಂಥ ವ, ಶ, ಷ, ಸ ಎಂಬ ನಾಲ್ಕು ಅಕ್ಷರಂಗಳು,



ಇವರ ಅಧಿದೈವ ಪಿನಾಕೀಶ ಖಡ್ಗೀಶ, ಶ್ವೇತ, ಭೃಂಗೀಶರೆಂಬ ನಾಲ್ವರು ರುದ್ರರು. ಈ ರುದ್ರರು ಶಕ್ತಿಯರಾದ ವಾರುಣಿ ಮಾಯ ವಿರಕ್ತಾವಧಾರಿಣಿ ಸಹಜೆ ಎಂಬವರು ನಾಲ್ವರು ಶಕ್ತಿಯರು ಸಮೇತವಾಗಿ ಆ ನಾಲ್ಕು ದಳಾಕ್ಷರಂಗಳೊಳಗಿರುತಿಹರು.

ಮೇಲೆ ಸ್ವಾಧಿಷ್ಠಾನ ಚಕ್ರದಲ್ಲಿರುವ ನೀಲ ವರ್ಣಕಮಲದ ಆರು ದಳಂಗಳೊಳಗಿರುವ ಬ. ಭ. ಮ. ಯ. ರ. ಲ. ಎಂಬುವ ಆರು ಪ್ರಣಮಂಗಳಿಗೆ ಅಧಿದೈವ ಶಿಖಿ ಸಕಲಾಂಡ ದ್ವಿಲಾಂಡ ಮಹಕಾಲ ಪಾಲ ಭುಜಗೇಶರೆಂಬ ಷಡುರುದ್ರರು ವಾಙ್ಮಯ, ಜೇಯೆ ಸುಮುಖಿ ಈಶ್ವರೀ ರೇವತಿ ಮಾಧವಿಯರೆಂಬ ಷಡುಶಕ್ತಿಯರು ಸಮೇತವಾಗಿ ಆರು ದಳಾಕ್ಷರಂಗಳಲ್ಲಿ ಇರುತಿಹರು.

ಆಮೇಲೆ ಮಣಿಪೂರಕ ಚಕ್ರದಲ್ಲಿರುವ ಕುಂಕುಮ ವರ್ಣದ ಕಮಲದ ದಶದಳಂಗಳಲ್ಲಿರುವ ಡ ಢ ಣ ತ ಥ ದ ಧ ನ ಪ ಫ ಎಂಬ ದಶಾಕ್ಷರಂಗಳು ಇವರ ಅಧಿದೈವ ದಾರುಕ, ಅರ್ಧನಾರೀಶ್ವರ, ಉಮಾಕಾಂತ, ಆಷಾಢಿ, ದಂಡಿ, ಅತ್ರಿ, ಮೀನ ಮೇಷ ಲೋಹಿತ ಶಿಖಿಯೆಂಬ ಹತ್ತು ರುದ್ರರು. ವಿರಜೆ ಕಲೋದರಿ ಪೂತನಿ ಭದ್ರಕಾಳಿ ಯೋಗಿನಿ ಶಂಕಿನಿ ಘರ್ಜನಿ ಕಾಳರಾತ್ರಿ ಕುರ್ದನಿ ಕಪರ್ದಿನಿಯರೆಂಬ ದಶಶಕ್ತಿಯರು ಸಮೇತವಾಗಿ ಆ ದಶಾಕ್ಷರಂಗಳಲ್ಲಿರುತ್ತಿಹರು.

ಅದರ ಮೇಲೆ ಇರುವ ಅನಾಹತ ಚಕ್ರದಲ್ಲಿ ಇರುವ ಹರಿತ ವರ್ಣ ಕಮಲದ ಹನ್ನೆರಡು ದಳಂಗಳೊಳಗಿರುವ ಕ ಖ ಗ ಘ ಙ ಚ ಛ ಜ ಝ ಞ ಟ ಠ ಎಂಬ ದ್ವಾದಶ ಪ್ರಣಮಂಗಳು ಇವರ ಅಧಿದೈವ ಕ್ರೋಧೀಶ, ಚಂಡೇಶ, ಪಂಚಾಂತಕ, ಶಿವೋತ್ತಮ ಏಕ ರುದ್ರ, ಕೂರ್ಮ, ಏಕ ನೇತ್ರ, ಚತುರಾನನ, ಅಗಜೇಶ, ಸರ್ವೇಶ, ಸೋಮೇಶ, ಲಾಂಗುಲಿ ಎಂಬ ದ್ವಾದಶ ರುದ್ರರು. ಮಹಾಕಾಳಿ ಸರಸ್ವತಿ ಗೌರಿ ಮಂತ್ರಶಕ್ತಿ ಆತ್ಮಶಕ್ತಿ ಭೂತಮಾತೆ ಲಂಬೋದರಿ ದ್ರಾವಿಣಿ ನಗರಿ ಖೇಚರಿ ಮಂಜರಿ ರೂಪಿಣಿಯರೆಂಬ ಹನ್ನೆರಡು ಶಕ್ತಿಯರು ಸಮೇತವಾಗಿ ಆ ದ್ವಾದಶ ದಳಾಕ್ಷರಂಗಳಲ್ಲಿಹರು.

ಮತ್ತದರಿಂ ಮೇಲೆ ವಿಶುದ್ಧಿ ಚಕ್ರದಲ್ಲಿರುವ ಸ್ಫಟಿಕ ವರ್ಣದ ಕಮಲದ ಹದಿನಾರು ದಳಂಗಳಲ್ಲಿ ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ ಎಂಬ ಷೋಡಶಾಕ್ಷರಂಗಳು, ಇವರ ಅಧಿದೈವ ಶ್ರೀಕಂಠ ಅನಂತ ಸೂಕ್ಷ್ಮ ತ್ರಿಮೂರ್ತಿ ಅಮರೇಶ ಅರ್ಘೇಶ ಭಾರಭೂತಿ ಆದಿಲೇಶ ಸ್ಥಾಣುಕ ಹರ ಝುಂಟೀಶ ಜಾತುಕ ಸದ್ಯೋಜಾತ ಅನುಗ್ರಹೇಶ್ವರ ಅಕ್ರೂರ ಮಹಾಸೇನರೆಂಬ ಹದಿನಾರು ರುದ್ರರು ಪೂರ್ಣೋದರಿ ವಿರಜೆ ಶಾಲ್ಮಲಿ ಲೋಲಾಕ್ಷಿ ವರ್ತುಲಾಕ್ಷಿ ದೀರ್ಘಘ್ರಾಣೆ ದೀರ್ಘ ಮುಖಿ ಗೋಮುಖಿ ದೀರ್ಘ ಜಿಹ್ವೆ ಕುಂಭೋದರಿ ಊರ್ಧ್ವಕೇಶಿ ವಿಕೃತಮುಖಿ ಜ್ವಾಲಾಮುಖಿ ಉಲ್ಕಾಮುಖಿ ಶ್ರೀಮುಖಿ ವಿದ್ಯಾಮುಖಿಯರೆಂಬ ಷೋಡಶ ಶಕ್ತಿಯರು ಸಮೇತವಾಗಿ ಆ ಷೋಡಶಾಕ್ಷರಂಗಳೊಳಗಿಹರು.

ಆಮೇಲೆ ಆಜ್ಞಾ ಚಕ್ರದಲ್ಲಿರುವ ಮಾಣಿಕ್ಯ ವರ್ಣದ ಕಮಲದ ದ್ವಿದಳದಲ್ಲಿರುವ ಹಂ ಕ್ಷಂ ಎಂಬೆರಡು ಪ್ರಣಮಂಗಳು. ಇವರ ಅಧಿದೈವ ಶಿವ ಸಂವರ್ತಕವೆಂಬೀರ್ವರು ರುದ್ರರು ವ್ಯಾಪಿನಿ, ಮಾಯಾನ್ವಿತೆಯರೆಂಬ ದ್ವಿಶಕ್ತಿಯರು ಸಮೇತವಾಗಿ ದ್ವಿದಳಾಕ್ಷರಂಗಳಲ್ಲಿಹರು.

ಮತ್ತಂ ಬ್ರಹ್ಮರಂಧ್ರ ಚಕ್ರದಲ್ಲಿಯ ಮರೀಚಿಕ ವರ್ಣದ ಕಮಲದ ಸಾವಿರದ ನೂರೈದು ದಳಂಗಳಲ್ಲಿರುವ ಳಕಾರ ಶೂನ್ಯ ಕಕಾರಾದಿ ಕ್ಷಕಾರಾಂತ್ಯಮಾದ ೩೪ ವ್ಯಂಜನಾಕ್ಷರಂಗಳು ಅಕಾರಾದಿ ಅಃಕಾರಾಂತ್ಯಮಾದ ೧೬ ಸ್ವರಾಕ್ಷರಂಗಳು ಹದಿನಾರು ಉಭಯಂ ಗೂಡಿ ಐವತ್ತಕ್ಷರಂಗಳು ಆ ಸಾವಿರದ ನೂರು ದಳಂಗಳಲ್ಲಿ ಲೋಮ ವಿಲೋಮದಿಂದಿರುತಿಹವು.

ಐದು ದಳಂಗಳಲ್ಲಿ ಓಂ ಹ್ರಾಂ ಹ್ರೀಂ ಹ್ರೂಂ ಹ್ರೈಂ ಎಂಬೈದು ಅಕ್ಷರಂಗಳಿಹವು. ಅದರ ಮಧ್ಯದಲ್ಲಿರುವ ನಿಃಕಲ ಲಿಂಗದ ಮೂರು ದಿಕ್ಕಿನಲ್ಲಿ ಮೂರು ಮಂಡಲಾಕಾರ ಆ ಮೂರು ಮಂಡಲಂಗಳೊಳಗೆ ಅಕಾರ ಉಕಾರ ಮಕಾರಗಳಿರುತಿಹವು.



ಶಿಖಾಚಕ್ರದಲ್ಲಿರುವ ಪಚ್ಚ ವರ್ಣದ ಕಮಲದ ಮೂರು ದಳಂಗಳಲ್ಲಿ ಅ ಉ ಮ ಎಂಬುವ ಮೂರು ಪ್ರಣಮಂಗಳಿರುತಿಹವು.

ಪಶ್ಚಿಮ ಚಕ್ರದಲ್ಲಿಯ ವಜ್ರ ವರ್ಣದ ಏಕ ದಳದಲ್ಲಿ ಅನುಸ್ವರವಾದಂಥ ದರ್ಪಣಾಕಾರದ ಬಿಂದು ಪ್ರಣಮ ಒಂದು ಇರುತ್ತಿಹುದು.

ಈ ನವಚಕ್ರಂಗಳ ನವ ವರ್ಣದ ನವ ಕಮಲಂಗಳ ಸಾವಿರದ ನೂರೈವತ್ತೊಂಭತ್ತು ಧಳಂಗಳಲ್ಲಿ ಸಾವಿರದ ನೂರೈವತ್ತೊಂಭತ್ತು ಪ್ರಣಮಂಗಳಿರುತಿಹವು. ಎಂಬುವದೀಗ ನವವಿಧದಿ ಬಳಸಿಕೊಂಡಿರ್ಪ ಮಂತ್ರಾಕ್ಷರದ ಅನುಮವಾಗಿರುತಿರ್ಪ ಅಧಿದೈವ ಶಕ್ತಿಯರು ಎಂಬ ಶಬ್ದಕ್ಕರ್ಥ.

ಇಂತಿವುಗಳ ಸುವಿವೇಕವರಿದು ಇಂತಪ್ಪ ಲೇಸಾದ ಲಿಂಗಾನುಭಾವವನರಿದು ನವಲಿಂಗಾರ್ಚನೆಯ ಮಾಳ್ಪವನೇ ಈ ನವವಿಧ ಲಿಂಗಗಳನು ಹಿಂದೆ ಹೇಳಲ್ಪಟ್ಟ ಕ್ರಮಗಳಿಂದಂತರಂಗದಲ್ಲಿಯು ಮಾನಸದಿಂದರ್ಚಿಸುವಂಥ ಶರಣನೇ ಮಂತ್ರಾತ್ಮಕನಹನು. ಷಡಕ್ಷರ ಮಂತ್ರ ಸ್ವರೂಪನೇ ತಾನಾಗುವನೆಂಬರ್ಥ ॥ ೧೯॥

---

ಪದ:—ಲಿಂಗಶ್ರೋತ್ರದೊಳಿರ್ದು ಕೇಳಿಕೆಯ ಶಬ್ದಗಳ। ನಂಗೈಸುಮೇಂ ಶೇಷಲಿಂಗ ಪ್ರಸಾದಮುಂ । ಲಿಂಗ ಸರ್ವಾಂಗದೊಳು ಬಂದು ಸೋಂಕುತ್ತಿರಲು ಮಂಗಳ ಪ್ರಸಾದವೆನಗೆ ॥ ಲಿಂಗ ನೇತ್ರದಿ ಪೊಕ್ಕು ನೋಡುತಿರೆ ರೂಪುಗಳ । ಸಾಂಗವಾಗಿಯೆ, ಎನಗೆ ಶುದ್ಧ ಪ್ರಸಾದವದು। ಲಿಂಗ ಜಿಹ್ವೆಯೊಳು ರುಚಿಸುತ್ತಿರಲಾವದು ತಾನೆ ಹಿಂಗದಿಹ ಸಿದ್ಧಶೇಷಾ

ಟೀಕು :— ಲಿಂಗ ಓಂಕಾರ ಮಂತ್ರ ಮೂರ್ತಿಯಾದ ಮಹಾಲಿಂಗವೇ ಶ್ರೋತ್ರದೊಳಿದ್ದು ಕರ್ಣಯುಗಳದಲ್ಲಿ ಯಕಾರ ಮಂತ್ರ

ಮೂರ್ತಿಯಾಗಿ ಪ್ರಸಾದಲಿಂಗವೆಂಬ ನಾಮದಿಂದಿರುತಿರ್ದು ಕೇಳಿಕೆಯ ಶಬ್ದಗಳ ಕುಶಬ್ದ ಸುಶಬ್ದವೆಂಬೆರಡು ಶಬ್ದಂಗಳ ಕೇಳಿಕೆಯ ನಂಗೈಸುವೇಂ ಶೇಷಲಿಂಗ ಪ್ರಸಾದಮಂ ಆ ಪ್ರಸಾದಲಿಂಗಕ್ಕೆ ಕರ್ಣದ್ವಾರವೆಂಬ ಈಶಾನ್ಯ ಮುಖದಲ್ಲಿ ಶಬ್ದ ಪ್ರಸಾದವನರ್ಪಿಸಿ ಅರ್ಪಿತವಾದ ಲಿಂಗಪ್ರಸಾದವನು ಆ ಶರಣನು ಸ್ವೀಕರಿಸುತಿಹನೆಂಬರ್ಥ. ಲಿಂಗ ಮತ್ತಾ ಮಹಾಲಿಂಗವೇ ಸರ್ವಾಂಗದೊಳು ನಿಂದು ಪಾದಾದಿ ಮಸ್ತಕಾಂತ್ಯವಾದ ಸರ್ವಾಂಗದ ತ್ವಕ್ಕಿನಲ್ಲಿ ಇದ್ದು ಸೋಂಕುತ್ತಿರಲು ತ್ವಗಿಂದ್ರಿಯವೆಂಬ ತತ್ಪುರುಷ ಮುಖದಲ್ಲಿ ವಕಾರ ಮಂತ್ರ ಮೂರ್ತಿ ಜಂಗಮಲಿಂಗವೆಂಬ ನಾಮದಿಂದ ಮೃದು ಕಠಿಣ ಶೀತೋಷ್ಣವೆಂಬ ನಾಲ್ಕು ತೆರದ ಸ್ಪರ್ಶನಂಗೈಯುತ್ತಿರಲು ಮಂಗಳ ಪ್ರಸಾದವೆನಗೆ ಇಹದ ಜನನ ಮರಣಂಗಳೆಂಬ ಅಶುಭಮಂ ಕಳೆದು ಸುಲಭ ಶೋಭನವೆಂಬ ಪರಮ ಪದವಿಯ ಕೊಡುವಂಥ ಆ ಜಂಗಮ ಲಿಂಗ ಸ್ಪರ್ಶನ ಪ್ರಸಾದವು ಪ್ರಾಣಲಿಂಗಿಯಾದವಗೆ ಸಾಧ್ಯವಾಯಿತ್ತು. ಲಿಂಗ ಆ ಮಹಾಲಿಂಗವೇ ನೇತ್ರದಿ ಪೊಕ್ಕು ನಯನೇಂದ್ರಿಯವೆಂಬ ಅಘೋರ ಮುಖದಲ್ಲಿ ಶಿಕಾರ ಮಂತ್ರ ಮೂರ್ತಿ ಶಿವಲಿಂಗವೆಂಬ ನಾಮದಿಂದಾಹ್ವಾನಿಸಿಕೊಂಡು ನೋಡುತಿರೆ ರೂಪುಗಳ ಸಮಸ್ತ ದೃಗ್ಗೋಚರ ಪದಾರ್ಥವನು ನಿರೀಕ್ಷಣೆಯ ಮಾಡುತ್ತಿರಲು ಸಾಂಗವಾಗಿಯೇ ಎನಗೆ ಪಾತ್ರವಾಗಿಯೆ ಪ್ರಸಾದಿಯಾದ ನನಗೆ ಶುದ್ಧ ಪ್ರಸಾದವನು ಆ ಶಿವಲಿಂಗದ ನಾನಾ ರೂಪು ಪ್ರಸಾದವು ಶುದ್ಧಪ್ರಸಾದವಾಗಿ ಅಂಗಗೊಂಡಿತ್ತು. ಲಿಂಗ ಆ ಮಹಾಲಿಂಗವೇ ಜಿಹ್ವೆಯೊಳು ವಾಮದೇವ ಮುಖವೆಂಬ ರಸನೆಯಲ್ಲಿ ಮಕಾರ ಮಂತ್ರಮೂರ್ತಿ ಗುರುಲಿಂಗವೆಂಬ ನಾಮದಿಂದ ರುಚಿಸುತ್ತಿರಲು ಷಡ್ರಸಂಗಳನು ಸ್ವೀಕರಿಸುತ್ತಿರಲು ಅದು ತಾನೇ ಆ ರಸ ಪದಾರ್ಥವು ತಾನೇ ಹಿಂಗದಿಹ ಸಿದ್ಧ ಶೇಷ ಆಕ್ಷಣಗಳು ತಡೆಗಡೆ ಇಲ್ಲದಿರುವ ಮಹೇಶ್ವರಂಗೆ ಸಿದ್ಧ ಪ್ರಸಾದವೆನಿಸುತ್ತಿಹನು.

ಶ್ಲೋಕ: ಲಿಂಗ ಹಸ್ತೋಪಿ ಸ್ಪರ್ಶಂಚ । ಲಿಂಗ ದೃಷ್ಟಿ ಲಿಂಗ ಜಿಹ್ವಾ ರಸಸ್ವಾದ । ಮಾಘ್ರಾಣಂ ಲಿಂಗನಾಸಿಕ ॥ ಶ್ರೋತ್ರಾಣಿಂ ಲಿಂಗ ಕರ್ಣಶ್ಚ ಲಿಂಗೇನ ಸಹವರ್ತಿನಾಂ

212
1758.



ತಾತ್ಪರ್ಯ :— ಲಿಂಗದ ನಯನದಿಂದ ನೋಡುತ್ತಿಹನು. ಲಿಂಗದ ಹಸ್ತದಿಂದ ಮುಟ್ಟುತ್ತಿಹನು. ಲಿಂಗದ ಕರ್ಣದಿಂದ ಕೇಳುತ್ತಿಹನು. ಲಿಂಗದ ಜಿಹ್ವೆಯಿಂದ ರುಚಿಸುತ್ತಿಹನು. ಲಿಂಗ ಚೇಷ್ಟಿಸುತ್ತಿರಲು ಚೇಷ್ಟಿಸುತ್ತಿಹನು ಎನಗೆ ಸ್ವತಂತ್ರವಾಗಿ ಎಲ್ಲವು ಲಿಂಗ ಸ್ವಾತಂತ್ರ್ಯವೆಂದರ್ಥ ॥ ೨೦ ॥

---

ಪದ:— ಲಿಂಗ ಘ್ರಾಣದೊಳು ಗವ ಗವಿಸಿ ಗಂಧಂಗಳಿಂಗಿತವನರಿದು ವಾಸಿಸೆ । ಲಿಂಗೋಚ್ಛಿಷ್ಟಮಂ ಲಿಂಗವದನದಿ ಕೊಂಬ ಲಿಂಗ ನುಡಿಯಲು ನುಡಿವೆ ಲಿಂಗ ಮನದೊಳು ಸೌಖ್ಯದಿಂ ॥ ಹಿಂಗದಿರುತಿರಲು ಲಿಂಗವೆನಗಾಗಿ । ಯಾಮನವು ಅಂಗ ಲಿಂಗವು ಮನವು ಎಂಬ ಭೇದವನಳಿದು । ಅಂಗವೆಲ್ಲವು ಲಿಂಗಮಯವಾಗಿ ಮನವೆಲ್ಲ ಲಿಂಗ ಪ್ರಸಿದ್ಧವಾಯಿತ್ತು ॥

ಟೀಕೆ: ಲಿಂಗ ಆ ಮಹಾಲಿಂಗವೇ ಘ್ರಾಣದೊಳು ಗವಗವಿಸಿ ಸದ್ಯೋಜಾತ ಮುಖವೆಂಬ ಘ್ರಾಣೇಂದ್ರಿಯದಲ್ಲಿ ನಕಾರ ಮಂತ್ರ ಮೂರ್ತಿ ಆಚಾರಲಿಂಗವೆಂಬ ನಾಮದಿಂದ ತುಂಬಿಕೊಂಡು ಗಂಧಗಳ ಸುಗಂಧ ದುರ್ಗಂಧವೆಂಬ ಗಂಧ ಭೇದಗಳ ಇಂಗಿತವನರಿದು ಕರಣಂಗಳು ಗಡಿಸುವ ಗಂಧವೇ ಅನರ್ಪಿತವು. ಮನಕ್ಕೆ ಇಂಪಾದ ಸುಗಂಧವೇ ಲಿಂಗಾರ್ಪಿತಕ್ಕೆ ಸಲುವುದೆಂದರಿದು ಘ್ರಾಣಿಸಲು ಅದು ಲಿಂಗಾರ್ಪಿತವೆನಿಸುವದು. ಅಂತಪ್ಪ ಗಂಧ ಪದಾರ್ಥವನು ವಾಸಿಸೆ ಆ ಲಿಂಗ ಘ್ರಾಣಿಸಿದಾಚಾರ ಲಿಂಗದ ಗಂಧ ಪ್ರಸಾದವನು ಲಿಂಗವದನದಿ ಕೊಂಬ ಆ ಆಚಾರ ಲಿಂಗ ಮುಖವೆನಿಸುವ ಘ್ರಾಣೇಂದ್ರಿಯದೊಳೆ ಆ ಭಕ್ತನು ಗಂಧ ಪ್ರಸಾದವನು ಭೋಗಿಸುತ್ತಿಹನು ಲಿಂಗ ಆ ಮಹಾ ಲಿಂಗವೆ ನುಡಿಯಲು ನುಡಿಯೆ ದೇವಾಲಯದ ಗರ್ಭಗುಡಿಯೊಳಗೆ ಮಾತನಾಡಿದರೆ ಆ ದೇವಾಲಯ ಮಾತನಾಡಿದ ಹಾಗೆ ... ಆ ಲಿಂಗವು ನುಡಿದಂತೆ ಆನು ನುಡಿವೆನು. ಲಿಂಗ ಆ ಮಹಾಲಿಂಗವೇ ಮನ

ದೊಳು ಗೌಪ್ಯದಿಂ ಸರ್ವ ವ್ಯಾಪಾರಂಗಳನು ಅಂತರಂಗದಲ್ಲಿ ನೆನೆವ ಮನದೊಳಗೆ ಲಿಂಗವು ಅಡಗಿಕೊಂಡಿರ್ದು ಹಿಂಗದಿರುತಿರಲು ಆ ಮನದೊಳಗೆ ಲಿಂಗವು ನಿಮುಷಾರ್ಧವಗಲದಿರುತಿರಲಾಗಿ ಲಿಂಗವೆಯಾಗಿಯಾ ಮನವು ಇಂತು ಲಿಂಗವನೊಳಕೊಂಡು ನೆನೆವ ಮನವು, ತಾನೇ ಪರಬ್ರಹ್ಮ ಸ್ವರೂಪವಾಗಿ ಅಂಗ ದೇಹವು ಲಿಂಗ ಬ್ರಹ್ಮವು ಮನವು ಮನವೆಂಬ ಭೇದವನಳಿದು ದೇಹ ಬೇರೆ ಲಿಂಗ ಬೇರೆ ಮನ ಬೇರೆ ಎಂಬ ಭೇದವನಳಿದು ಅಂಗವೆಲ್ಲವು ಲಿಂಗಮಯವಾಗಿ ಆ ಶರಣನ ದೇಹವೆಲ್ಲವು ಇಷ್ಟಲಿಂಗವಾಗಿ ಮನವೆಲ್ಲ ಮನಸ್ಸೆಂಬುದೆಲ್ಲ ಲಿಂಗ ಪ್ರಸಿದ್ಧವಾಯಿತ್ತು. ಆ ಮಹಾ ಬ್ರಹ್ಮದ ಪ್ರಸಿದ್ಧ ಪ್ರಸಾದವಾಯಿತ್ತು ಎಂಬರ್ಥ

**ಸಾಕ್ಷಿ:—** ಶ್ಲೋ ॥ ರೂಪಂ ಶುದ್ಧ ಸಮಾಖ್ಯಾತಂ । ರುಚೀನಾಂ ಸಿದ್ಧ ಸಂಜ್ಞಕಂ । ತನುಮೀಶ ಸ್ಪರ್ಶಣಃ ಶಂಭುಃ । ಪ್ರಸೀದಂತು ಪ್ರಸಾದಕಂ ॥

**ತಾತ್ಪರ್ಯ:—** ನಯನದಿಂದ ನೋಡಿದ ರೂಪು ಪದಾರ್ಥವೆಲ್ಲವು ಶಿವಲಿಂಗದ ಶುದ್ಧ ಪ್ರಸಾದವು. ಜಿಹ್ವೆಯಿಂದ ರುಚಿಸುವ ರಸಪದಾರ್ಥವೆಲ್ಲವು ಗುರುಲಿಂಗದ ಪ್ರಸಾದವು. ತನ್ನ ಮನಸ್ಸಿಗೆ ಸಾಕಾದ ತೃಪ್ತಿಯೇ ಮಹಲಿಂಗದ ಪ್ರಸಿದ್ಧ ಪ್ರಸಾದವೆಂದರ್ಥ

**ಶ್ಲೋ:—** ಲಿಂಗ ಘ್ರಾಣಂತು ಘ್ರಾಣಸ್ಯ । ಲಿಂಗಸ್ಯ ವದನೇ ಸಹ ಲಿಂಗ ಮನೋಗತೋ ವಾಪಿ । ಇತ್ಯೇತೆ ಸಹ ಭೋಜನಂ,

**ತಾತ್ಪರ್ಯ:—** ಲಿಂಗ ನಾಸಿಕದಿಂದಲೇ ವಾಸಿಸುತ್ತಿಹೆನು. ಲಿಂಗ ನುಡಿದಡೆ ನುಡಿಯುತ್ತಿಹೆನು. ಲಿಂಗವು ಗ್ರಹಿಸಿದೊಡೆ ಗ್ರಹಿಸುತ್ತಿಹೆನು. ಇದೀಗ ಆ ಲಿಂಗಕ್ಕೂ ಶರಣಂಗೂ ಒಂದೇ ಅರ್ಪಿತವೆಂಬ ತಾತ್ಪರ್ಯ ॥ ೨೧ ॥

---



**ಪದ:—** ಲಕ್ಷವಿಟ್ಟೀಕ್ಷಿಸುತ ಅಕ್ಷರೈವತ್ತಾರು । ಆಕ್ಷೇಪಂ ಬಿಡದೆ ನಿಟಿಲಾಕ್ಷಗಳಿವೆಂಬುದು । ಕುಕ್ಷಿಯೊಳಗಿರುವ ಷಡುಚಕ್ರ ಕರ್ಣಿಕೆಯ ದಳದ । ನಿಕ್ಷೇಪವಿದೆಂದರಿವುದೂ ॥ ಮೋಕ್ಷ ಸಾಧಕ ಪರಬ್ರಹ್ಮ ರಂಧ್ರದೊಳಿರ್ಪ ಅಕ್ಷರವು ಮೂರು, ಶತ ಸಹಸ್ರವು ಪರಿಯೊಳ್ । ನಾಲ್ಕು ಅಕ್ಷರವು ಪಶ್ಚಿಮದಿ ಉಭಯವರ್ಣವಿನೊಳೊಂದು ಸಾಕ್ಷಾತ್ಪರ ಬ್ರಹ್ಮವು ॥

**ಟೀಕು:—** ಲಕ್ಷ್ಯವಿಟ್ಟು ಆಧಾರಾದಿ ಅಣುವಾಂತ್ಯವಾದ ದಶ ಚಕ್ರಂಗಳನು ಕರುಹಿಟ್ಟುಕೊಂಡು ಈಕ್ಷಿಸುತ ಆಯಾಯ ಚಕ್ರಂಗಳಲ್ಲಿರುವ ಕಮಲ ದಳಂಗಳು ದಳ ಪ್ರಣವಂಗಳು ಕಿಂಜಲ್ಕದ ಗರ್ಭಗೃಹಂಗಳಲ್ಲಿರುವ ಬೀಜ ಪ್ರಣವಂಗಳ ಅವುಗಳ ವರ್ಣಗಳ ಆಯಾಯ ಲಿಂಗ ಪ್ರಕಾಶಂಗಳ ಸುಚಿತ್ತಾದಿ ಹಸ್ತಂಗಳಲ್ಲಿ ಷಡಕ್ಷರ ಮಂತ್ರ ಸ್ಮರಣೆಯಿಂದೆ ಆಯಾಯ ಮೂಲ ಮಂತ್ರಂಗಳಿಂ ಆ ಲಿಂಗಗಳರ್ಚನೆಯಂ ಮಾಡಿ ಗಂಧಾದಿ ಷಟ್ಪದಾರ್ಥಂಗಳನು ಷಡ್ವಿಧ ಭಕ್ತಿಯಿಂದರ್ಪಿಸಿ ಅಂತರಂಗದ ಚಿದ್ದೃಕ್ಕಿನಿಂದಾಯಾಯ ಲಿಂಗಗಳ ಚಿದ್ಬೆಳಗನು ನೋಡುತ್ತ ಅಕ್ಷರೈವತ್ತಾರು ಳಕಾರ ಶೂನ್ಯವಾಗಿ ಕಕಾರಾದಿ ಅಃಕಾರಾಂತ್ಯವಾದ ಐವತ್ತಕ್ಷರಂಗಳು ಬೀಜ ಪ್ರಣವವೆನಿಸುವ ಓಂಕಾರಾದಿ ನಮಃಶಿವಾಯ ಯೆಂಬ ಷಡಕ್ಷರಂಗಳು ಕೂಡಿ ಐವತ್ತಾರು ಪ್ರಣವಗಳು ಆಕ್ಷೇಪಂ ಬಿಡದೆ ಈ ಐವತ್ತಾರು ಪ್ರಣವಂಗಳೇ ಅಕ್ಷರ ಮಂತ್ರ ಮೂರ್ತಿ ಎಂಬಲ್ಲಿ ಸಂದೇಹಂ ಬಿಡದೆ ನಿಟಿಲಾಕ್ಷಗಳಿವೆಂದರಿದು ಹಣೆಯಲ್ಲಿ ಉರಿಗಣ್ಣುಳ್ಳ ಪರಶಿವ ಲಿಂಗ ಸ್ವರೂಪವಾದ ಅಕ್ಷರ ಮಂತ್ರಗಳೆಂದು ತಿಳಿದು ಕುಕ್ಷಿಯೊಳಗಿರುವ ಅಂತರಂಗದೊಳಗಿರುವ ಷಡುಚಕ್ರ ಆಧಾರಾದಿ ಆಜ್ಞಾಂತ್ಯವಾದ ಷಡುಚಕ್ರ ಕರ್ಣಿಕೆ ದಳದ ಆರು ಚಕ್ರ ದಳದ ಐವತ್ತಕ್ಷರ ಸಹವಾಗಿ ಐವತ್ತಾರು ಪ್ರಣವಂಗಳು ನಿಕ್ಷೇಪವಿದೆಂದರಿವುದು ಆ ಷಡು ಕಮಲಂಗಳ ದಳ ಕರ್ಣಿಕೆಗಳಲ್ಲಿ ಗೌಪ್ಯವಾಗಿರ್ಪವೆಂಬುದನು ಚನ್ನಾಗಿ ತಿಳಿಯತಕ್ಕದ್ದು. ಮೋಕ್ಷ ಸಾಧಕ ಇಹದ ಫಲ. ಪರದ ಭೋಗಾದಿಗಳನ್ನು ನಿರಾಕರಿಸಿ ಮೇಲಾದ ಪರ ಬ್ರಹ್ಮದಲ್ಲಿ ಸಮರಸವಾಗುವಂಥ ಶರಣನು ಪರ ಆರು ಚಕ್ರಂಗಳಿಗೆ ಮೇಲಾದಂಥ ಬ್ರಹ್ಮರಂಧ್ರದೊಳಿರುತಿರ್ಪ ಪರಬ್ರಹ್ಮವೆನಿಸುವ ಉನ್ಮನಿಯ ಸ್ಥಾನದೊಳಗಿರುವಂಥ ಅಕ್ಷರವು ಮೂರು ಆ ಸಾವಿರದ ಐನೂರೈದು ದಳಂಗಳುಳ್ಳ ಕಮಲ ಕರ್ಣಿಕೆಯಲ್ಲಿ ಬೀಜ

ಪ್ರಣಮ ಒಂದು ಐದು ದಳಂಗಳಲ್ಲಿ ಐದು ಪ್ರಣಮಂಗಳು ಮಂಡಲ ತ್ರಯಂಗಳಲ್ಲಿ ಮೂರು ಪ್ರಣಮಂಗಳು ಸಹವಾಗಿ ಒಂಬತ್ತು ಪ್ರಣಮಂಗಳು ಶತ ನೂರು ಸಹಸ್ರವು ಹತ್ತುನೂರು ಅಂತು ಸಾವಿರದನೂರು ಪ್ರಣಮಂಗಳು ಪರಿಯೊಳ್ ನಾಲ್ಕು ಆ ಬ್ರಹ್ಮ ಚಕ್ರಕ್ಕೆ ಉಪಸ್ಥಾನವೆನಿಸುವ ಶಿಖಾ ಚಕ್ರದಲ್ಲಿಯು ಕಮಲದ ತ್ರಿದಳಂಗಳಲ್ಲಿರುವ ಅ ಉ ಮಾಕ್ಷರವೆಂಬಿವು ಮೂರು ಕರ್ಣಿಕೆಯಲ್ಲಿರುವ ಕ್ಷಕಾರ ಪ್ರಣಮ ಒಂದುಗೂಡಿ ನಾಲ್ಕು ಪ್ರಣಮಂಗಳು ಅಕ್ಷರವು ಪಶ್ಚಿಮದಿ ಮತ್ತೆ ಪಶ್ಚಿಮ ಚಕ್ರದಲ್ಲಿ ಉಭಯ ಅಲ್ಲಿಯ ಏಕದಳದಲ್ಲಿ ಒಂದು ಪ್ರಣಮ ಒಂದು ಕರ್ಣಿಕೆಯಲ್ಲಿ ವ್ಯಂಜನ ಹಕಾರ ಪ್ರಣಮ ಒಂದು ಸಹವಾಗಿ ಎರಡು ಪ್ರಣಮಂಗಳು ಅಣುವಿನೊಳೊಂದು ಆ ನವ ಚಕ್ರಂಗಳಿಗತೀತವಾದ ಅಣುಚಕ್ರವೆಂಬತಿ ಸೂಕ್ಷ್ಮ ಚಕ್ರದಲ್ಲಿ ಅನಾಚ್ಯಸ್ವರೂಪವಾದ ವ್ಯಂಜನ ರಹಿತ ಹಕಾರ ಪ್ರಣಮ ಒಂದು ಸಾಕ್ಷಾತ್ಪರ ಬ್ರಹ್ಮವು ಈ ದಶಚಕ್ರಂಗಳೊಳಗಿರುವ ಕಮಲ ಕರ್ಣಿಕೆಯ ಬೀಜ ಪ್ರಣಮಂಗಳು ೧೦ ಆ ಚಕ್ರಗಳ ದಳ ಪ್ರಣಮ ಸಾವಿರದ ನೂರಾ ಅರವತ್ತೆರಡು ಸಹವಾಗಿ ಸಾವಿರದ ನೂರೆಪ್ಪತ್ತೆರಡು ಪ್ರಣಮಂಗಳು ಪ್ರತ್ಯಕ್ಷ ಪರಬ್ರಹ್ಮ ಸ್ವರೂಪವೆಂದು ತಿಳಿದು ಮಾನಸದಲ್ಲಿ ಸ್ಮರಿಸಿ ಪೂಜಿಸಬೇಕೆಂಬ ತಾತ್ಪರ್ಯ

॥ ೨೨ ॥

---

ಪದ:— ಬ್ರಹ್ಮ ರಂಧ್ರದಲ್ಲಿ ಬಾಲವನಿಟ್ಟು । ಷಡು ವರ್ಮವನು ತಿಳಿಯದೆ ಯಧೋ ದ್ವಾರದಲಿ ಪರಶಿವ । ನೆಮ್ಮಿಕೊಂಡಿರುವರಿದು । ಲೌಕಿಕರ್ಗೆ ಸಹಜ ಧರ್ಮ ಸ್ವರೂಪರೆನಿಪಾ ॥ ನಿರ್ಮಲ ಚಿದಾತ್ಮ ಶಿವ ಶರಣನೂರ್ಧ್ವಕೆ ಶಿರವ । ಸುಮ್ಮಾನದಿಂದೆತ್ತಿ ಷಡು ಬ್ರಹ್ಮವೆಜಿಸುತ್ತ । ಬ್ರಹ್ಮ ರಂಧ್ರದಲ್ಲಿ ಮೊಗವಿಟ್ಟು । ಕುಂಡಲಿ ಉಪರಿಲಿಂಗಗಳನಂವುತಿಹುದು ॥

ಟೀಕು:— ಬ್ರಹ್ಮರಂಧ್ರದಲ್ಲಿ ನೆತ್ತಿ ಸ್ಥಾನದಲ್ಲಿರುವ ಅಜರಂಧ್ರ ದ್ವಾರದಲ್ಲಿ ಬಾಲವನಿಟ್ಟು ಜೀವನೆಂಬ ಕುಂಡಲಿಯ ಸರ್ಪನು ಆ ರಂಧ್ರ



ದ್ವಾರದಲ್ಲಿ ಪುಟವನು ಇಟ್ಟು ಷಡು ಚಕ್ರ ಆಧಾರಾದಿ ಆಜ್ಞಾಂತ್ಯಮಾದ ಆರು ಚಕ್ರಗಳ ವರ್ಮವನು ತಿಳಿಯದೆ ಆ ಷಡು ಚಕ್ರಂಗಳಲ್ಲಿರುವ ಕಮಲ ದಳ ಪ್ರಣವ ಕರ್ಣಿಕಾ ಪ್ರಣಮ ಲಿಂಗಂಗಳನು ಅರಿಯದೆ ಅಧೋ ದ್ವಾರದಲ್ಲಿ, ಗುದಸ್ಥಾನದಲ್ಲಿ ಶಿವ ನೆಮ್ಮಿಕೊಂಡಿರುವದು ತಲೆಯ ನಿಟ್ಟುಕೊಂಡು ಮಲ ಭಕ್ಷಿಯಾಗಿರುವದು. ಇದು ಮಾಯಾ ಶಕ್ತಿಯೆಂಬ ಈ ಕುಂಡಲಿಯು ಸರ್ಪನು ಬಾಲ ಮೇಲಾಗಿ ತಲೆ ಕೆಳಗಾಗಿ ಮಲಗ್ರಾಸಿಯಾಗಿರುವಂತಹದ್ದು ಲೌಕಿಕರ್ಗೆ ಸಹಜ. ಲೌಕಿಕ ವರ್ತನೆಯುಳ್ಳ ಮನುಜರಿಗೆ ಈ ಕುಂಡಲಿಯು ಮಾಯಾ ಶಕ್ತಿಯು ತಲೆ ಕೆಳಗಾಗಿರುವದೇ ಯಥಾರ್ಥವು. ಧರ್ಮ ಸ್ವರೂಪರೆನಿಪ ಸತ್ಯ ವಚನ ಭೂತ ದಯೆ ಹಿಂಸಾರಹಿತನಾಗಿ ಮಂತ್ರ ಸ್ಮರಣೆ ಲಿಂಗ ದೇಹಿ ಅಂತರಂಗದ ಪ್ರಾಣಲಿಂಗ ಸಂಬಂಧಿಗಳೆನಿಸುವ ನಿರ್ಮಲ ಚಿದಾತ್ಮ ಮಲ ಮಾಯಾ ಕರ್ಮವಿಲ್ಲದ ಜ್ಞಾನಾತ್ಮ ಸ್ವರೂಪರಾದಂಥ ಶಿವ ಶರಣ ಪರಶಿವನ ಸದಾ ಅಂತರಂಗದಲ್ಲಿ ಆರಾಧಿಸುವ ಹರ ಶರಣನು ಊರ್ಧ್ವಕ್ಕೆ ಶಿರವ ಮೊದಲಧೋ ಮುಖವಾಗಿರ್ದ ಕುಂಡಲಿಯನು ಮೇಲು ಮುಖವನು ಮಾಡಿ ಅಧೋಮುಖ ಊರ್ಧ್ವ ಮುಖವೆಂದಡೆ ಲೌಕಿಕ ವರ್ತನವೇ ಅಧೋಮುಖವೆನಿಸುವುದು. ಪಾರಮಾರ್ಥನಾದ ಶಿವ ಶರಣನ ಆಚರಣೆಯೇ ಊರ್ಧ್ವಮುಖವೆನಿಸುವದೆಂದರಿದು ಸುಮ್ಮಾನದಿಂದೆತ್ತಿ ನಾನು ಅಧೋಮುಖದಿಂದೆ ಮಲಹಾರಿಯಾಗಿ ನಿಯಕ್ಕೆ ಪ್ರಾಪ್ತಿಯಾದ ಜೀವನು ನಾನು ಹಿಂದೆ ಏಸು ಕಾಲ ಸುಕೃತವ ಮಾಡಿರ್ದೆನೋ ಎನಗೆ ಶ್ರೀ ಗುರು ಕೃಪೆಯಿಂದೂರ್ಧ್ವ ಮುಖ ಪ್ರಾಪ್ತಿಯಾಯಿತ್ತೆಂಬ ಕುತೂಹಲದಿಂ ಶಿವಾಚಾರ ಮುಖದಿಂ ಮುಖವನೆತ್ತಿ ಷಡು ಬ್ರಹ್ಮವ ಯಜಿಸುತ್ತ ಆಚಾರಾದಿ ಮಹಾಲಿಂಗಾಂತ್ಯವಾದ ಆರು ಲಿಂಗಂಗಳನು ಆಯಾಯ ಮಂತ್ರ ಶಕ್ತಿ ಭಕ್ತಿಯ ಭೇದದಿಂದ ಪೂಜೆಯ ಮಾಡುತ್ತ ಬ್ರಹ್ಮರಂಧ್ರದಲ್ಲಿ ಮೊಗವಿಟ್ಟು ಬ್ರಹ್ಮರಂಧ್ರ ಚಕ್ರದಲ್ಲಿರ್ಪ ನಿಃಕಲ ಲಿಂಗನನಾರಾಧಿಸಿ ತನ್ನ ಮುಖವನಾ ಲಿಂಗದ ಚರಣಾರವಿಂದದಲ್ಲಿಟ್ಟು ಕುಂಡಲಿ ಮಾಯಾ ಶಕ್ತಿಯೆಂಬಾ ಗುಣವಳಿದು ಲಿಂಗದೇಹಿ ಜ್ಞಾನ ಶಕ್ತಿಯೆಂಬ ಚಿದೋರಗನು ಉಪರಿ ಅಲ್ಲಿಂ ಮೇಲಿರುವ ಶಿಖಾಚಕ್ರ ಪಶ್ಚಿಮಚಕ್ರ ಅಣು ಚಕ್ರದಲ್ಲಿರುವಂಥ ಲಿಂಗಗಳು ಆ ಚಕ್ರದಲ್ಲಿರುವ ಶೂನ್ಯ ಬ್ರಹ್ಮ ನಿರಂಜನ ಬ್ರಹ್ಮ ನಿರವಯ ಬ್ರಹ್ಮವನ್ನು ಅರಿವುತ್ತಿಹುದು ಧ್ಯಾನಾರ್ಚನೆಗಳಿಂದೆ ತಿಳಿದು ನೋಡುತ್ತಿಹುದೆಂಬರ್ಥ.

---

ಪದಃ— ಇದನರಿಯದವಗೆ ಭವಬಂಧ ಇದನರಿವವಗೆ । ಸದಮಲದ ಮೋಕ್ಷವಿದು ದಶಚಕ್ರದೊಳಗಿರುವ । ಪದುಮ ಪ್ರಣವಾದಿ ಲಿಂಗಯೋಗ ಮಂತ್ರಧ್ಯಾನವಿದವೆ ಸರ್ವಜ್ಞತ್ವವೂ ॥ ಇದು ಪರಬ್ರಹ್ಮವಯವೆಂದರಿದು ಪರಿಪೂರ್ಣಮನ । ಒದಗಿ ಸರ್ವಾವಸ್ಥೆಯೊಳಗೆ ಮಂತ್ರ ಸ್ಮರಣೆ । ವಿಧಿಸುತಿಹ ಶರಣ ತಾ ಪರಬ್ರಹ್ಮದೊಳಗೈಕ್ಯಯಿದಕೆ ದೃಷ್ಟವದಂತೆನೇ ॥

ಟೀಕುಃ— ಇದನರಿದವಗೆ ಈ ಜ್ಞಾನ ದರ್ಪಣ ಭೇದವನರಿಯದವಗೆ ಭವಬಂಧ. ಇಹಲೋಕದೊಳಗೆ ಬಂದು ಎಂಬತ್ತುನಾಲ್ಕುಲಕ್ಷ ಜೀವರಾಶಿಯೊಳಗೆ ಪುಟ್ಟಿ ಉಣ್ಣದೂಟವನುಂಡು ಕೊಳಬಾರದ ಪಾನವ ಕೊಂಡು ಮಾಡಬಾರದ ಕರ್ಮವ ಮಾಡಿ, ಕಿಂ ವ್ಯಾಧಿಗಳಿಂದ ಬಾಧೆಯಬಟ್ಟು ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧ ಪಾಶದಿಂ ಕಟ್ಟುವಡೆದು ಅಸ್ಥಿ ಮಾಂಸ ಶ್ರೋಣಿತ ಚರ್ಮ ನರಂಗಳೆಂಬ ಶಕ್ತಿಮನೆಯೋಳ್ ಸಿಲುಕಿ ಭವಾರಣ್ಯದೊಳಗೆ ತೊಳಲಿ ಬಳಲುವದೇ ಭವಬಂಧವೆನಿಕುಂ. ಇವನರಿದವಗೆ ಪೂರ್ವೋಕ್ತ ಪ್ರಾಣಲಿಂಗ ಲಕ್ಷಣವನರಿದಾರಾಧಿಸುವ ಶರಣಂಗೆ ಸದಮಲದ ಮೋಕ್ಷ ಜನನ ಮರಣಂಗಳನಳಿದು ಸದಾನಂದ ನಿರ್ಮಲ ಪರಬ್ರಹ್ಮದೊಳ್ ಸಮರಸವಪ್ಪ ಮುಕ್ತಿಯು, ಇದು ಈ ಪ್ರಾಣಲಿಂಗಂಗಳು ದಶಚಕ್ರದೊಳಗಿರುವ ಆಧಾರಾದ್ಯಣಾವಾಂತ್ಯವಾದ ಹತ್ತು ಚಕ್ರಂಗಳಲ್ಲಿರುವ ಪದುಮ ತಾವರೆಯ ಕಮಲಂಗಳ ಪ್ರಣವಾದಿ ಆ ಕಮಲಗಳಲ್ಲಿರುವ ದಳ ಪ್ರಣವು ಕರ್ಣಿಕಾ ಕಮಲದಲ್ಲಿರುವ ಲಿಂಗ ಆ ಪರವಸ್ತುವೇ ಯೋಗ ಮಂತ್ರ, ಆ ಪ್ರಣವಂಗಳಲ್ಲಿರ್ಪ ಅಕ್ಷರಂಗಳೇ ಪರಬ್ರಹ್ಮಸ್ವರೂಪವೆಂದು ಧ್ಯಾನ ಆ ಮಂತ್ರಲಿಂಗಂಗಳನೇ ಅಂತರಂಗದಲ್ಲಿ ಧ್ಯಾನಿಪುದೇ ಇದುವೇ ಸರ್ವಜ್ಞತ್ವವು. ಈ ಮಂತ್ರ ಲಿಂಗಂಗಳನೇ ಸರ್ವಕಾಲ ಚಿಂತಿಪುದೇ ಸರ್ವಜ್ಞತ್ವವೆನಿಪುದು. ಮತ್ತಂ ತಮಲ್ಲದೆ ಈ ಮಂತ್ರ ಲಿಂಗಂಗಳೇ ಪರಬ್ರಹ್ಮಸ್ವರೂಪವೆಂದು ತಿಳಿದು ಇದೇ ವಸ್ತುವೆಂದು ನಿರ್ಧರಿಸಿ ಪರಿಪೂರ್ಣ ಮನ ಈ ಬ್ರಹ್ಮವು ತನ್ನ ಸರ್ವಾಂಗದಲ್ಲಿ ಕಿಷ್ಕಿಂಧಮಯವಾಗಿ ತುಂಬಿಕೊಂಡಿರುವದೆಂಬುದು ಮನದಲ್ಲಿ ನಿಶ್ಚೈಸಿ ಒದಗಿ ಒಪ್ಪಚ್ಚಿಯಾದಡೂ ತೆರಪುಗೊಡದೆ ಬರುವಂಥ ಸರ್ವಾವಸ್ಥೆಯೊಳಗೆ ಸುಖದುಃಖ ಜಾಗ್ರತ್ ಸ್ವಪ್ನ ಸುಷುಪ್ತಿ ಮುಂತಾದೆಲ್ಲಾವಸ್ಥೆಯೊಳಗೂ ಮಂತ್ರಸ್ಮರಣೆ ಮಂತ್ರ ಲಿಂಗಂಗಳನೇ ಸ್ತೋತ್ರವ ಮಾಡಿ ವಿಧಿಸುತಿಹ ಚಕ್ರಂಗಳೇ ಪೀಠವಾಗಿ

ಕಿಂಜಲ್ಕಗಳಲ್ಲಿರುವ ಕೋಣೆಗಳೇ ಗರ್ಭಗೃಹವಾಗಿ ಬೀಜ ಪ್ರಣಮಂಗಳೇ ಲಿಂಗಂಗಳಾಗಿ ಜ್ಞಾನ ಜಲದಲ್ಲಿ ಮಜ್ಜನಕೆರೆದು ದಳಂಗಳೇ ಪುಷ್ಪ ಮಾಲಿಕೆಗಳಾಗಿ ದಳಪ್ರಣಮಂಗಳೇ ಮಂತ್ರಂಗಳಾಗಿ ವರ್ಣಗಳೇ ಬೆಳಗಿನಾರತಿಯಾಗಿ ಜ್ಞಾನೇಂದ್ರಿಯಗಳೆಂಬ ಷಡ್ವಿಧ ವಿಷಯವೆಂಬ ಪಂಚಾಮೃತ ಪದಾರ್ಥವನು ಷಟ್ಕರಣಗಳೆಂಬ ಹಸ್ತದಿಂ ಪೂಜಿಸಿ ಅರ್ಪಿಸುವಂಥ ಶರಣತಾ ಇಂತಪ್ಪ ಮಹಾತ್ಮನು ತಾನೆ ಪರಬ್ರಹ್ಮದೊಳಗೈಕ್ಯ ನಿರವಯಲಿಂಗಂಗಳೊಳಗೆ ಬೆರೆವನು. ಇದಕ್ಕೆ ದೃಷ್ಟವದೆಂತೆಂದೆನೆ, ಆ ನಿರವಯ ಲಿಂಗಗಳೊಳಗೆ ಬೆರೆವನು. ಆ ನಿರವಯ ವಸ್ತುವಿನೊಳಗೆ ಶರಣನು ಬೆರೆದನೆಂಬುದಕ್ಕೆ ಉಪಮಾನವೆಂತೆಂದೊಡೆ ಮುಂದೆ ಹೇಳಲ್ಪಡುವದೆಂಬರ್ಥ

ಸಾಕ್ಷಿಃ— ಶ್ಲೋ.—ಷಡಕ್ಷರ ಸಮಾಖ್ಯಾತಂ ಷಡಾನನ ಸಮನ್ವಿತಂ ಷಡ್ಭೇದಂ ತು ನ ಜಾನಾತಿ ಪೂಜಾ ನಿಃಫಲಂ ಭವೇತ್ ॥

ತಾತ್ಪರ್ಯ:— ಷಡಕ್ಷರಂಗಳು ನನ್ನ ಆರು ಮುಖಂಗಳಲ್ಲಿ ಕೂಡಿಹವೆಂಬ ಭೇದವನು ಆವನು ಅರಿಯನು ಅವನು ಮಾಡಿದುದೆಲ್ಲವು ನಿಃಫಲವೆಂದು ಈಶವಾಕ್ಯ ಸಾರುತ್ತಿಹುವೆಂಬರ್ಥ ॥೨೪॥

---

ಪದಃ— ಕಾದ ಕಬ್ಬಿನ ನೀರನುಂಡಂತೆ ಲೋಹ ಸೋಂ। ಕಿದ ಪರುಷ ಕನಕಮಯವಾದಂತೆ ತಿಮಿರಮಂ । ಆ ದಿನಪನೊಳಕೊಂಡ ಪರಿಯಂತೆ ಅಗ್ನಿಯೊಳು ತೀವಿರುವ ಕರ್ಪೂರದೋಲು ॥ ಪಾಪಾದಿ ಮಸ್ತಕಾಂತ್ಯ ದೊಳಿರ್ಪ ದಶಚಕ್ರ ವಾದಿಯಾದಖಿಳಷಡು ಲಿಂಗವನರ್ಚಿಸುವ ಶರಣ। ಭೇದವಿಲ್ಲದೆ ಪರ ಬ್ರಹ್ಮದೊಳಗೈಕ್ಯ ವೆಂದೋದುವುದು ಲಿಂಗಾಗಮಾ ॥

ಟೀಕು ಃ- ಕಾದ ಕಬ್ಬಿಣವನು ಹಸಿಯ ಕಬ್ಬಿಣವನು ಅಗ್ನಿಯೊಳಿಟ್ಟು ಕಾಸಲು ನೀರನುಂಡಂತೆ ಆ ಕಾದ ಕಬ್ಬಿಣವು ನೀರ ಕುಡಿದಂತೆ ಲೋಹ ಸೋಂಕಿದ ಪರುಷ ಕನಕಮಯವಾದಂತೆ ಪಂಚ ಲೋಹಂಗಳು ಆ ಪರುಷ ಸೋಂಕಲೊಡನೆ ಸುವರ್ಣ ಮಯವಾದ ಹಾಗೆ ಆ ತಿಮಿರಮಂ ಅಂಧಕಾರವಾದ ಕತ್ತಲೆಯನು ಆ ದಿನಪನೊಳಗೊಂಡ

ಹರಿಯಂತೆ ಸೂರ್ಯನ ಪ್ರಕಾಶವು ಒಳಕೊಂಡಂತೆ ಆ ಕತ್ತಲೆಯನು ಸೂರ್ಯನ ಪ್ರಕಾಶವೇ ಆವರಿಸಿಕೊಂಡು ಪ್ರಕಾಶಮಯವಾದ ಹಾಗೆ ಅಗ್ನಿಯೊಳಗೆ ಅನಲನೊಳಗೆ ತೀವಿರುವ ತುಂಬಿಕೊಂಡಿರುವಂಥ ಕರ್ಪುರದೊಲು ಕರ್ಪುರದೊಳಗೆ ಅಗ್ನಿಯು ತುಂಬಿಕೊಂಡಂತೆ ಆ ಕರ್ಪುರ ಸಂಗವಾದಗ್ನಿಯು ಬಯಲಾಗಿ ಹೋಗುವಂತೆ ಎಂಬ ದೃಷ್ಟಾಂತದಂತೆ, ಕಬ್ಬಿಣವೆಂಬ ದೇಹದಲ್ಲಿ ಲಿಂಗವೆಂಬ ಅಗ್ನಿಯು ವೇಧಿಸಿ ನೀರೆಂಬ ಪ್ರಪಂಚ ವಿಷಯ ಪದಾರ್ಥವನು ಆ ಶರಣನಂತರಂಗದಲ್ಲಿರುವ ಲಿಂಗವೇ ಸ್ವೀಕರಿಸುತ್ತಿಹುದು. ಮತ್ತಂ ಪಂಚಲೋಹವೆಂಬ ಪಂಚ ಭೂತಾತ್ಮಕವಾದ ಶರಣನ ದೇಹವನು ಪರುಷವೆಂಬ ಪಂಚಲಿಂಗಂಗಳು ಬಂದು ಸೋಂಕಲೊಡನೆ ಆ ಪಂಚ ಭೂತಾತ್ಮವೆಂಬ ದೇಹಗುಣವನಳಿದು ಸುವರ್ಣವೆಂಬ ಲಿಂಗ ದೇಹವಾಯಿತ್ತು. ಮತ್ತಂ ತಿಮಿರವೆಂಬ ಅಜ್ಞಾನ ಮಾನವಗೆ ಗುರು ಕಾರುಣ್ಯವೆಂಬ ಚಿತ್ಸೂರ್ಯನು ಅಂತರಂಗದಲ್ಲಿ ಪ್ರಾಣ ಲಿಂಗವಾಗಿ ಪ್ರಕಾಶಿಸಲು ಆ ಅಜ್ಞಾನವೆಲ್ಲವು ಹರಿದು ಸುಜ್ಞಾನ ರೂಪವಾದ ಲಿಂಗ ಪ್ರಕಾಶವೇಯಾದ ಶರಣನಾಗಿ ಆ ಪ್ರಕಾಶದಲ್ಲಿಯೇ ಬೆರೆವನೆಂಬರ್ಥ. ಚಿದಗ್ನಿಯೆಂಬ ಲಿಂಗದಲ್ಲಿ ಕರ್ಪುರವೆಂಬ ಶರಣನು ,ಆ ಲಿಂಗವೇ ಒಂದು ಒಡಲಾಗಿ ಆ ಶರಣನು ಆ ಲಿಂಗದಲ್ಲಿ ಕೂಡುಗಲು ಆ ಲಿಂಗದ ಸಂಪರ್ಕದಿಂದ ಲಿಂಗವೇಯಹನು. ಪಾದಾದಿ ಮಸ್ತಕಾಂತ್ಯದೊಳಿರ್ಪ ದಶ ಚಕ್ರಪಾದವೇ ಮುಂತಾಗಿ ಶಿರವೇ ಕಡೆಯಾದ ಸರ್ವಾಂಗದೊಳಗಿರುವ ಆಧಾರಾದಿ ಅಣುವಾಂತ್ಯವಾದ ಹತ್ತು ಸುದರ್ಶನಂಗಳಿಗೆ ಆದಿಯಾದಖಿಳ ಷಡುಲಿಂಗ ಆಚಾರಾದಿ ನಿರವಯಾಂತ್ಯಲಿಂಗಗಳನು ಅರ್ಚಿಸುವ ಶರಣ ಹಿಂದೆ ಹೇಳಲ್ಪಟ್ಟ ಕ್ರಮದಿಂ ಪೂಜಿಸುವಂಥ ಮಹಾತ್ಮನು ಭೇದವಿಲ್ಲದೆ ಲಿಂಗ ಬೇರೆ ಶರಣ ಬೇರೆಂಬ ಹೊರೆಗಾಣಿಸದೆ ಪರಬ್ರಹ್ಮದೊಳೈಕ್ಯವೆಂದು ಆ ಪರವಸ್ತುವಿನಲ್ಲಿಯೇ ಶರಣ ಲೀಯವಾಗುವನೆಂದು ಓದುವದು ಲಿಂಗಾಗಮವು, ಶಿವಾಗಮ ಪುರಾಣಂಗಳಲ್ಲಿ ಉಸುರುತ್ತಿಹುದೆಂಬರ್ಥ.

**ಸಾಕ್ಷಿ**:- ಶ್ಲೋ. ಸರ್ಪ ದಷ್ಟಸ್ಯ ಯದ್ದೇಹಂ ತದ್ದೇಹಂ ವಿಷ ದೇಹವತ್ ॥ ಲಿಂಗ ದಷ್ಟಸ್ಯ ಯದ್ದೇಹಂ ತದ್ದೇಹಂ ಲಿಂಗದೇಹವತ್ ॥೧॥

**ತಾತ್ಪರ್ಯ**:— ಸರ್ಪ ಕಚ್ಚಿದ ಶರೀರವೆಲ್ಲ ವಿಷ ವೇಧಿಸಿ ವಿಷಮಯವಾದಂತೆ ಲಿಂಗ ಸೋಂಕಿದ ಶರೀರವೆಲ್ಲವು ಲಿಂಗ ದೇಹವಹುದೆಂಬ ತಾತ್ಪರ್ಯ ॥ ೨ ॥

---



**ಪದ**: - ಗಂಡು ಗತ್ತರಿಯ ನಾಚಯ್ಯಗಳ ಚರಣಾಬ್ಜ । ತೊಂಡನೆಂದೆನಿಪ ಕರಿ ಬಸವ ರಾಜನ ಹೃದಯ । ಪುಂಡರೀಕದೊಳೊಗೆದ ಚನ್ನ ವೀರನು ಬಸವ ದಂಡನಾಥನ ಕೃಪೆಯೊಳು ॥ ಕೊಂಡಾಡಿದೀ ಸಪ್ತ ವಿಂಶತಿ ಪದಂಗಳನು । ಪಿಂಡದೊಳು ಪ್ರಣಮ ಲಿಂಗವ ನರ್ಚಿಸುವ ಶರಣ । ಉಂಡು ಉಪವಾಸಿ ಬಳಸಿಯೆ ಬ್ರಹ್ಮಚಾರಿಯಖಂಡ ಬ್ರಹ್ಮದೊಳೈಕ್ಯವೂ ॥

**ಟೀಕು**:- ಗಂಡುಗತ್ತರಿಯ ನಾಚಯ್ಯಗಳ ಬಸವೇಶ್ವರ ಮುಂತಾದ ಏಳುನೂರೆಪ್ಪತ್ತು ಅಮರಗಣ ಸಂಕುಲದೊಳಗೆ ಗಂಡುಗತ್ತರಿಯ ನಾಚಯ್ಯಗಳೆಂಬುವ ಶಿವಶರಣನ ಚರಣಾಬ್ಜ. ಆ ನಾಚಯ್ಯಗಳ ಶ್ರೀ ಪಾದ ಕಮಲಗಳ ತೊಂಡನೆಂದೆನಿಪ ಗೋವು ಗುಲಾಮಲೆಂಕ ನೆಂದೆನಿಸಿ ಕೊಂಬಂಥ ಕರಿಬಸವರಾಜನ ಹೃದಯ. ಆ ನಾಚಯ್ಯಗಳ ಬಿರಿದನು ಹೊತ್ತು ಮೆರೆವಂಥ ಗಂಡುಗತ್ತರಿಯ ಕರಿಬಸವ ದೇವರೆಂಬಾತನ ಹೃದಯ ಪುಂಡರೀಕದೋಳಗೆ ಜನಿಸಿದಂಥ ಚನ್ನವೀರನು ಚನ್ನವೀರ ದೇವರೆಂಬಾತನು ಬಸವದಂಡ ನಾಥನ ಕೃಪೆಯೊಳು ದ್ವಿತೀಯ ಶಂಭುವಾದಾ ಬಸವೇಶ್ವರ ಸ್ವಾಮಿಯವರ ಕಟಾಕ್ಷೆಯಿಂದೆ ಕೊಂಡಾಡಿದೀ ಸಪ್ತ ವಿಶಂತಿ ಪದಂಗಳನು ಶರಣ ಜನಂಗಳು ಅಂತರಂಗದಲ್ಲಾರಾಧಿಸುವಂಥ ಸಕೀಲಂಗಳನು ಪದ ಸ್ವರೂಪಿನಿಂ ಉಗ್ಗಡಿಸಿ ಹೇಳಿದ ಈ ಇಪ್ಪತ್ತೇಳು ಪದಂಗಳನು ಪಿಂಡದೊಳು ಈ ಶರೀರದೊಳಗೆ ಪ್ರಣಮದಳ ಪ್ರಣಮ ಕರ್ಣಿಕಾ ಪ್ರಣಮ ಷಡಕ್ಷರ ಪ್ರಣಮಯುಕ್ತವಾಗಿ ಲಿಂಗವ ಆಚಾರಾದಿ ನಿರವಯಾಂತ್ಯವಾದ ಹತ್ತು ಲಿಂಗಂಗಳನು ಅರ್ಚಿಸುವ ಶರಣ ಅಂಗ, ಲಿಂಗ, ಹಸ್ತ, ಮುಖ ಪದಾರ್ಥ, ಪ್ರಸಾದವೆಂಬ ಷಡ್ವಿಧ ಸಕೀಲಂಗಳಿಂದೆ ಪೂಜಿಸುವ ಶಿವ ಶರಣನು ಉಂಡು ಉಪವಾಸಿ ಆ ಶರಣನು ಆರೋಗಿಸುವುದೆಲ್ಲವು ಲಿಂಗವೇಯಾದುದಾಗಿ ಆನೆಂಬ ಭಾವವಿಲ್ಲದರಿಂ ಉಂಡು ಉಪವಾಸಿ ಬಳಸಿಯುಂ ಬ್ರಹ್ಮಚಾರಿ ಅಂಗಕ್ಕೆ ಸೋಂಕಿದ ಸ್ಪರ್ಶನ ಪದಾರ್ಥವೆಲ್ಲವು ಜಂಗಮಲಿಂಗದ ಮುಖದಿಂದೆಲ್ಲ ಲಿಂಗಗಳಿಗೂ ತೃಪ್ತಿಯಾಗುವದಾಗಿ ಅದೆಲ್ಲಾ ಲಿಂಗಾಚಾರವೆನಿಸಿತೆಂಬರ್ಥ. ಅಖಂಡ ಬ್ರಹ್ಮದೊಳೈಕ್ಯವು ಅನಂತ ಕೋಟಿ ಚತುರ್ದಶ ಭುವನ ಬ್ರಹ್ಮಾಂಡಗಳ ಕೊಂಡು ಅಡಿ ಮುಡಿ ಒಳಲ ಘಾತವೆಂಬಖಂಡಿತವಿಲ್ಲದ ಮಂಡಲಾಕಾರವನುಳ್ಳ ಅದ್ವಿತೀಯವಾದ ಮಹಾಘನಲಿಂಗದಲ್ಲಿ ಇಂತಪ್ಪ ಶರಣನು ಬಯಲೊಳ್ ಬಯಲು ಬೆರೆದಂತೆ ಸಮರಸವಹನೆಂಬರ್ಥ

**ಸಾಕ್ಷಿ:**— ಶ್ಲೋ॥ ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ । ಲಿಂಗ ಬಾಹ್ಯ ಪರಂ ನಾಸ್ತಿ ತಸ್ಮಾತ್ ಲಿಂಗಪ್ರಪೂಜಯೇತ್ ॥

**ತಾತ್ಪರ್ಯ:**—ಹದಿನಾಲ್ಕು ಲೋಕಂಗಳು ಸ್ವರ್ಗ ಮರ್ತ್ಯ ಪಾತಾಳವೆಂಬ ತ್ರಿಲೋಕಂಗಳು ಖೇಚರ ಭೂಚರ ಸ್ಥಾವರಾದಿಗಳೆಲ್ಲವು ಆ ಪರಬ್ರಹ್ಮದ ಗರ್ಭದ ಮಧ್ಯದಲ್ಲಿಯೇ ಇರುವವು. ಲಿಂಗದಿಂ ಹೊರಗಾದುದೇನೂ ಇಲ್ಲವಾದ ಕಾರಣ ಅಂತಪ್ಪ ಲಿಂಗವನ್ನೇ ಮೋಕ್ಷಾರ್ಥಿಗಳು ಪೂಜಿಸಬೇಕೆಂಬ ತಾತ್ಪರ್ಯ ॥೨೬।

---

**ಪದ:**— ಪರಮ ಪತಿವ್ರತೆಯ ಪುರುಷನು ಮುನಿದು ದುರ್ಜನರೊಳಿರಿಸೆ ಪುರುಷನ ಚಿಂತೆಯಲ್ಲದನ್ಯವನರಿಯ । ದಿರಲರಿದು ತತ್ಪುರುಷನೈತಂದು ಮೋಹಿಸುವ ಪರಿಯಂತೆ ಎನ್ನ ನೀನೂ ॥ ಶರೀರಕರಣಂಗಳೆಂಬರಿಗಳೊಳಿರಿಸೆ ನಿನ್ನಯ ಪದದ । ಸ್ಮರಣೆ ಧ್ಯಾನದೊಳರ್ಚಿಸುತಿರ್ಪ ಕಿಂಕರನ । ಚರಣ ಕಮಲದೊಳು ಇಂಬಿಟ್ಟು ಸಲಹುವುದೆನ್ನ ಗುರುಗುಹೇಶ್ವರ ಲಿಂಗವೇ ॥

**ಟೀಕು:**— ಪರಮ ಉತ್ಕೃಷ್ಟವಾದಂಥ ಪತಿವ್ರತೆಯು ಕಂಭ ಕುಂಭ ಸಾಕ್ಷಿಯಾಗಿ ದೇವಭಕ್ತರುಗಳು ಲಿಂಗ ಗಂಟಿಕ್ಕಿ ಕೊಂಡಂಥಾ ಪುರುಷನಲ್ಲದೆ ಪರಪುರುಷರ ನಿರಾಕರಿಸಿ ಪುರುಷ ಭಕ್ತಿಯುಳ್ಳಯೇ ನೈಷ್ಠೆಯುಳ್ಳ ಕುಲಸ್ತ್ರೀಯಳನು ಪುರುಷನು ಮುನಿದು ಒಂದಾನೊಂದು ವೇಳೆ ಆ ಸ್ತ್ರೀಯಳ ಮನ ಧರ್ಮವ ನೋಡುವೆನೆಂದು ಮನಸ್ತಾಪವಂ ಮಾಡಿ ದುರ್ಜನರೊಳಿರಿಸೆ ಲಿಂಗ ಬಾಹ್ಯರಾದ ಭವಿಜನರ ಸಮೂಹ ಮಧ್ಯದಲ್ಲಿ ಸ್ಥಾಪನವಂ ಮಾಡಲು ಪುರುಷನ ಮೇಲಣ ಮಮತೆಯ ಬಿಡದೆ ಸುಹಕರ ಕುಬೋಧೆಗೊಳಪಡದೆ ತನ್ನ ಪುರುಷನು ಮುನಿದು ತಿರಸ್ಕರಿಸಿದನೆಂದಾಕ್ಷೇಪವಿಲ್ಲದೆ ಆ ಪುರುಷನ ವ್ಯಸನದಿಂದ ಅನ್ಯವನರಿಯದಿರಲು ತನ್ನ ಪುರುಷನ ಭಕ್ತಿಯೊಂದಲ್ಲದೆ ಅನ್ಯವ್ರತವನ್ನು ಅರಿಯದೇ ಇರುತ್ತಿರಲು ಅರಿದು ಆ ಪುರುಷನು ತನ್ನ ಸ್ತ್ರೀಯಳ ಗುಣಧರ್ಮವ ತಿಳಿದು ತತ್ಪುರುಷನೈತಂದು ಆ ಪುರುಷನು ತನ್ನ ಸ್ತ್ರೀಯಳಿದ್ದೆಡೆಗೆ ಬಂದು ಮೋಹಿಸುವ ಪರಿಯಂತೆ ತೆಕ್ಕೆ ಚುಂಬನ ಮಮತೆಯಂ ಮಾಡುವಂತೆ ಎನ್ನ ನೀನು ಆ ಪುರುಷರ ನಡೆಯಂತೆ ಎಲೆ ಪರಶಿವನೆ ಶರಣಸತಿ ಲಿಂಗಪತಿ ಎಂಬ ಪ್ರಮಾಣ